ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ

ಶುಕ್ರವಾರ, ಜುಲೈ 26, 2024

ಸಂಪುಟ : 51 ಸಂಚಿಕೆ : 73 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



ಚಿತ್ರ: ರಫೀಕ್, ಜನತಾವಾಣಿ

**ನಾಟಿ ಸೊಬಗು ...** ಜಿಲ್ಲೆಯಲ್ಲಿ ಬೀಳುತ್ತಿರುವ ಉತ್ತಮ ಮಳೆ ರೈತರ ಹರ್ಷ ಇಮ್ಮಡಿಸಿದೆ. ಕೃಷಿ ಚಟುವಟಿಕೆಗಳು ಬರದಿಂದ ಸಾಗುತ್ತಿವೆ. ದೇವರ ಬೆಳಕೆರೆ ಬಳಿಯ ಜಮೀನಿನಲ್ಲಿ ಗುರುವಾರ ಭತ್ತದ ಸಸಿ ನಾಟಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಕೃಷಿಕರು.

# ಕಲಾಪ ನುಂಗಿದ ಮುಡಾ

## ಅನಿರ್ದಿಷ್ಟಾವಧಿಗೆ ವಿಧಾನ ಮಂಡಲದ ಕಲಾಪ ಮುಂದೂಡಿಕೆ

ಬೆಂಗಳೂರು, ಜು. 25 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನಗಳ ಹಂಚಿಕೆ ಹಗರಣ ವಿಧಾನಮಂಡಲದ ಕಲಾಪವನ್ನೇ ನುಂಗಿ ಹಾಕಿದ್ದಲ್ಲದೆ, ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲು ಕಾರಣವಾಯಿತು.

ವೇಳಾಪಟ್ಟಿಯಂತೆ ಕಲಾಪ ಶುಕ್ರವಾರಕ್ಕೆ (ಜುಲೈ 26) ಅಂತ್ಯಗೊಳ್ಳಬೇಕಿತ್ತು, ಆದರೆ, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ಕೋರಿ ಮಾಡಿದ ಒತ್ತಡಕ್ಕೆ ಸರ್ಕಾರ ಮಣಿಯದಿದ್ದಾಗ, ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಧರಣಿಯನ್ನು ಇಂದೂ ಮುಂದುವರೆಸಿದರು.

ಪ್ರತಿಪಕ್ಷಗಳ ಗದ್ದಲ, ಧರಣಿ ನಡುವೆ ಕೇಂದ್ರ ಸರ್ಕಾರದ ವಿರುದ್ಧ ಮೂರು ನಿರ್ಣಯಗಳೂ ಸೇರಿದಂತೆ ಕೆಲವು ಮಸೂದೆಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಯಿತು. ಮಸೂದೆಗಳು ಮಂಡನೆಯಾಗುತ್ತಿದ್ದಂತೆ ವಿಧಾನಮಂಡಲದ ಉಭಯ ಸದನಗಳ ಸಭಾಧ್ಯಕ್ಷ ಮತ್ತು ಸಭಾಪತಿ ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಿದರು.

ಎರಡನೇ ಬಾರಿಗೆ ಸದನ ಸೇರಿದಾಗಲೂ ಪ್ರತಿಪಕ್ಷಗಳು ತಮ್ಮ ಪಟ್ಟು ಬಿಡಲಿಲ್ಲ, ಸರ್ಕಾರ ತನ್ನ ನಿಲುವಿನಿಂದ ಹಿಂದೆ ಸರಿಯಲಿಲ್ಲ. ಉಭಯ ಸದನಗಳಲ್ಲಿ ಪೀಠಾಸೀನಾಧಿಕಾರಿಗಳ ಮನವಿಗೆ ಪ್ರತಿಪಕ್ಷ ಸದಸ್ಯರು ಸ್ಪಂದಿಸದೇ ಧರಣಿ ಮುಂದುವರೆಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಲಾರಂಭಿಸಿದರು. (4ನೇ ಪುಟಕ್ಕೆ)



## ಪ್ರತಿಭಟನೆ ಸದನದಿಂದ ಬೀದಿಗೆ

### ಮೈಸೂರಿಗೆ ಪಾದಯಾತ್ರೆ ಕೈಗೊಳ್ಳಲು ವಿಪಕ್ಷಗಳ ನಿರ್ಧಾರ

ಬೆಂಗಳೂರು, ಜು. 25 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನಗಳ ಹಂಚಿಕೆ ಹಗರಣದ ಚರ್ಚೆಗೆ ಸರ್ಕಾರ ಅವಕಾಶ ನೀಡಲಿಲ್ಲವೆಂದು ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸದನದಿಂದ ಬೀದಿಗಿಳಿಯಲಿದ್ದಾರೆ.

ವಿಧಾನಮಂಡಲದಲ್ಲಿ ಚರ್ಚೆಗೆ ಅವಕಾಶ ನೀಡಲಿಲ್ಲವೆಂದು ಅಹೋರಾತ್ರಿ ಧರಣಿ ನಡೆಸಿದ ಉಭಯ ಪಕ್ಷಗಳ ಸದಸ್ಯರು ಸರ್ಕಾರದ ನಿಲುವು ವಿರೋಧಿಸಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಮೈಸೂರಿಗೆ ಪಾದಯಾತ್ರೆ ಕೈಗೊಳ್ಳಲಿದ್ದಾರೆ.

ಬೆಂಗಳೂರಿನಿಂದ ಮೈಸೂರಿನವರೆಗೂ ಪಾದಯಾತ್ರೆ ನಡೆಸುವುದಲ್ಲದೆ, ಎರಡು ನಗರಗಳ ನಡುವಿನ (4ನೇ ಪುಟಕ್ಕೆ)

## ದಾವಣಗೆರೆ ಉಪ ವಿಭಾಗಾಧಿಕಾರಿಯಾಗಿ ಸಂತೋಷ್ ಕುಮಾರ್

ಬೆಂಗಳೂರು, ಜು.25- ದಾವಣಗೆರೆ ಉಪ ವಿಭಾಗಾಧಿಕಾರಿಯನ್ನಾಗಿ ಸಂತೋಷ್ ಕುಮಾರ್ ಅವರನ್ನು ನೇಮಕ ಮಾಡಿ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಚಿಕ್ಕಬಳ್ಳಾಪುರ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರಾಗಿದ್ದ ಸಂತೋಷ್ ಕುಮಾರ್ ಅವರನ್ನು ದಾವಣಗೆರೆ ಎಸಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಸರ್ಕಾರದ ಅಧೀನ ಕಾರ್ಯದರ್ಶಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ದಾವಣಗೆರೆ ಉಪ (4ನೇ ಪುಟಕ್ಕೆ)

## ಸತತ ಮೂರನೇ ದಿನವೂ ಬಂಗಾರದ ಬೆಲೆ ಇಳಿಕೆ

ನವದೆಹಲಿ, ಜು. 25 - ಸತತ ಮೂರನೇ ದಿನ ಬಂಗಾರದ ಬೆಲೆಯಲ್ಲಿ ಇಳಿಕೆಯಾಗಿದೆ. ಗುರುವಾರ ದಂದು ಬಂಗಾರದ ಬೆಲೆ 10 ಗ್ರಾಂಗಳಿಗೆ 1000 ರೂ.ಗಳಷ್ಟು ಇಳಿದಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಂಗಾರದ ಬೆಲೆ ಇಳಿಮುಖ ವಾಗಿದೆ. ಇದರ ಪರಿಣಾಮ ಸ್ಥಳೀಯ ಮಾರುಕಟ್ಟೆ ಯಲ್ಲೂ ಕಂಡುಬಂದಿದೆ. ಬುಧವಾರದಂದು ಬಂಗಾರದ ಬೆಲೆ 71,650 ರೂ. ಗಳ ಹಂತದಲ್ಲಿ ಅಂತ್ಯವಾಗಿತ್ತು. ಗುರುವಾರ ದಂದು 70,650 ರೂ. ಗಳಿಗೆ ಇಳಿಕೆಯಾಗಿದೆ. (2ನೇ ಪುಟಕ್ಕೆ)

## ತಕ್ಷಣವೇ ಭದ್ರಾ ನೀರು ಹರಿಸಲು ರೈತ ಒಕ್ಕೂಟದಿಂದ ಒತ್ತಾಯ



ದಾವಣಗೆರೆ, ಜು. 25 – ಭದ್ರಾ ಅಣೆಕಟ್ಟೆಯಿಂದ ಅಚ್ಚುಕಟ್ಟು ಪ್ರದೇಶಕ್ಕೆ ತಕ್ಷಣವೇ ನೀರು ಹರಿಸಬೇಕೆಂದು ಭಾರತೀಯ ರೈತ ಒಕ್ಕೂಟ ಒತ್ತಾಯಿಸಿದೆ.

ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಒಕ್ಕೂಟ, ಕಳೆದ ಜು.23ರಂದು ಜಿಲ್ಲಾಧಿಕಾರಿಗಳ ಕಚೇರಿ ಯಲ್ಲಿ ನಡೆದ ಸಭೆಯಲ್ಲಿ ರೈತರ ಬೇಡಿಕೆ ಬಗ್ಗೆ ಚರ್ಚಿಸಲಾಗಿತ್ತು. ಉಪ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಜು.24 ರಂದು ಸಭೆ ನಡೆಯಲಿದೆ ಎಂದು ನಮಗೆ ತಿಳಿಸಲಾಗಿತ್ತು. ಆದರೆ, ಈಗ ಸಭೆಯನ್ನು ಆಗಸ್ಟ್ 5ಕ್ಕೆ ನಿಗದಿ ಪಡಿಸಲಾಗಿದೆ ಎಂದು ತಿಳಿಸಿದೆ.

ಭದ್ರಾ ನಾಲೆಗಳಿಗೆ ನೀರು ಹರಿಸುವ ಸಭೆಯನ್ನು ವಿಳಂಬ ಮಾಡಿರುವುದು ರೈತ ವಿರೋಧಿ ನೀತಿಯಾಗಿದೆ. ಈ ತಿಂಗಳ ಕೊನೆಗೆ ಅಣೆಕಟ್ಟು ತುಂಬಿ ನೀರು ಹೆಚ್ಚುವರಿಯಾಗಿ ಹರಿದು ಹೋಗಲಿದೆ. ಕಾಲುವೆಗೆ ಈಗಲೇ ನೀರು ಬಿಟ್ಟರೆ ಅಚ್ಚುಕಟ್ಟಿನ ಕೆರೆಗಳು ತುಂಬುತ್ತವೆ. ಈಗಲೇ ನಾಟಿ ಮಾಡಿದರೆ ಚಳಿಗಾಲ ಹಾಗೂ ಮೂಡುಗಾಳಿಗೆ ಸಿಲುಕಿ ಭತ್ತದ ಇಳುವರಿ ಕುಂಠಿತವಾಗುವುದು ತಪ್ಪುತ್ತದೆ ಎಂದು ಒಕ್ಕೂಟ ತಿಳಿಸಿದೆ.

ಈಗಲೇ ನೀರು ಹರಿಸಿದರೆ, ಮಳೆಗಾಲ ಮುಗಿದ ಮೇಲೂ ಅಣೆಕಟ್ಟೆಯಲ್ಲಿ ಪೂರ್ಣ ಪ್ರಮಾಣದ ನೀರು ನಿಲ್ಲುತ್ತದೆ. ಇಷ್ಟಾದರೂ, ನಾಲೆಗಳಿಗೆ ನೀರು ಹರಿಸುವುದು ವಿಳಂಬ ಮಾಡಿದರೆ, ಕುಡಿಯುವ ನೀರು ಹಾಗೂ ಬೇಸಿಗೆ ಬೆಳೆಗೆ ತೊಂದರೆಯಾಗಲಿದೆ. ಇದಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಒಕ್ಕೂಟದ ಗೌರವಾಧ್ಯಕ್ಷರೂ, ಮಾಜಿ ಸಚಿವರೂ ಆದ ಎಸ್.ಎ. ರವೀಂದ್ರನಾಥ್, ಅಧ್ಯಕ್ಷ ಹೆಚ್.ಆರ್. ಲಿಂಗರಾಜ್ ಜಿಲ್ಲಾಧಿಕಾರಿ ಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಎಸ್. ನಾಗ ರಾಜ್ ರಾವ್ ಕೊಂಡಜ್ಜಿ, ಎ.ಎಂ. ಮಂಜುನಾಥ್, ಮಹೇಶ್ವರಪ್ಪ, ಪಿ.ವಿ. ರವಿಕುಮಾರ್, ಎ.ಬಿ. ಕರಿಸಬಸಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಖನಿಜಗಳ ಮೇಲೆ ತೆರಿಗೆಗೆ ರಾಜ್ಯಗಳಿಗೆ ಅಧಿಕಾರ

### ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು


ನವದೆಹಲಿ, ಜು. 25 - ಖನಿಜಗಳ ಮೇಲಿನ ರಾಯಧನವು ತೆರಿಗೆ ಅಲ್ಲ. ಖನಿಜ ಹಾಗೂ ಖನಿಜ ಹೊಂದಿರುವ ಜಮೀನಿನ ಮೇಲೆ ತೆರಿಗೆ ಹೇರಲು ರಾಜ್ಯಗಳಿಗೆ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಸುಪ್ರೀಂ ಕೋರ್ಟ್‌ನ ಈ ತೀರ್ಪು ಖನಿಜ ಸಂಪತ್ಭರಿತ ರಾಜ್ಯಗಳಾದ ಜಾರ್ಖಂಡ್ ಹಾಗೂ ಒಡಿಶಾ ಮುಂತಾ ದವುಗಳಿಗೆ ಉತ್ತೇಜನ ನೀಡಲಿದೆ. ಖನಿಜ ಗಳ ಮೇಲೆ ಕೇಂದ್ರ ಸರ್ಕಾರ ಹೇರುತ್ತಿರುವ ಸಾವಿರಾರು ಕೋಟಿ ರೂಪಾಯಿಗಳ ತೆರಿಗೆಯನ್ನು ತಮಗೆ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯಗಳು ಅರ್ಜಿ ದಾಖಲಿಸಿದ್ದವು.

ಕೇಂದ್ರ ಸರ್ಕಾರ ರಾಜ್ಯಗಳಿಗೆ ನೀಡಬೇಕಾಗಿರುವ ತೆರಿಗೆ ಮರುಪಾವತಿಯನ್ನು ಪೂರ್ವಾನ್ವಯ ಮಾಡಬೇಕು ಎಂದು ರಾಜ್ಯಗಳು ಸುಪ್ರೀಂಕೋರ್ಟ್ ನಲ್ಲಿ ಮನವಿ ಮಾಡಿಕೊಂಡಿದ್ದವು.

ಆದರೆ ಈ ಮನವಿಯನ್ನು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತೀವ್ರವಾಗಿ ವಿರೋಧಿಸಿದ್ದು , ತೀರ್ಪಿನ ನಂತರ ಮರುಪಾವತಿ ಜಾರಿಯಾಗಬೇಕು ಎಂದು ಕೋರಿದ್ದಾರೆ. (2ನೇ ಪುಟಕ್ಕೆ)

## ಬಂಗಾರದ ಬೇಡಿಕೆಯಲ್ಲಿ ಶೇ.20ರಷ್ಟು ಹೆಚ್ಚಳ



ನವದೆಹಲಿ, ಜು. 24 - ಕೇಂದ್ರ ಸಚಿವೆ ನಿರ್ಮಲ ಸೀತಾರಾಮನ್ ಅವರು ಬಜೆಟ್‌ನಲ್ಲಿ ಬಂಗಾರದ ಮೇಲಿನ ಆಮದು ಸುಂಕವನ್ನು ಇಳಿಸಿದ ನಂತರ, ಬಂಗಾರದ ಬೆಲೆ ಇಳಿಕೆಯಾಗಿದ್ದು, ಗ್ರಾಹಕರು ಖರೀದಿಗೆ ಧಾವಿಸುತ್ತಿದ್ದಾರೆ.

ಅದರಲ್ಲೂ ಮದುವೆಯ ಮುಹೂರ್ತದ ದಿನಗಳು ಹತ್ತಿರ ಬರುತ್ತಿರುವದರಿಂದ ಬಂಗಾರದ ಬೇಡಿಕೆ ಗಣನೀಯವಾಗಿ ಹೆಚ್ಚಾಗಿದೆ.

ಭಾರತ ವಿಶ್ವದ ಎರಡನೇ ಅತಿದೊಡ್ಡ ಬಂಗಾರದ ಮಾರುಕಟ್ಟೆಯಾಗಿದೆ. ತೆರಿಗೆ ಕಡಿತದ ನಂತರ ಬಂಗಾರದ ಬೇಡಿಕೆ ಇನ್ನಷ್ಟು (4ನೇ ಪುಟಕ್ಕೆ)

## ನೀಟ್ ರದ್ದುಗೊಳಿಸಿ ಸಿಇಟಿ ಮೂಲಕ ಪ್ರವೇಶಕ್ಕೆ ನಿರ್ಣಯ

ಬೆಂಗಳೂರು, ಜು. 25 - ದೇಶಾದ್ಯಂತ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಕಲ್ಪಿಸುವ ನೀಟ್ ಪರೀಕ್ಷಾ ವ್ಯವಸ್ಥೆ ರದ್ದುಗೊಳಿಸಿ, ಕರ್ನಾಟಕದಲ್ಲಿ ಸಿಇಟಿ ಮೂಲಕ ಪ್ರವೇಶಾತಿಗೆ ರಿಯಾಯಿತಿ ನೀಡುವ ನಿರ್ಣಯವನ್ನು ವಿಧಾನಮಂಡಲದ ಉಭಯ ಸದನಗಳಲ್ಲಿಂದು ಕೈಗೊಳ್ಳಲಾಯಿತು.

ಪ್ರತಿಪಕ್ಷಗಳ ಧರಣಿ, ಗದ್ದಲಗಳ ನಡುವೆಯೇ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ನಿರ್ಣಯ ಮಂಡಿಸಿದರು.

ನೀಟ್ ಪರೀಕ್ಷಾ ವ್ಯವಸ್ಥೆಯು ಗ್ರಾಮೀಣ ಬಡ ಮಕ್ಕಳ ವೈದ್ಯಕೀಯ ಶಿಕ್ಷಣಾವಕಾಶಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಹಾಗೂ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ನಿರರ್ಥಕಗೊಳಿಸುವುದು ಮಾತ್ರವಲ್ಲದೆ, ರಾಜ್ಯ ಸರ್ಕಾರದ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಸರ್ಕಾರದ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ.

ಇಂತಹ ಪರೀಕ್ಷಾ ವ್ಯವಸ್ಥೆಯಿಂದ ಕರ್ನಾಟಕಕ್ಕೆ ವಿನಾಯಿತಿ ನೀಡಬೇಕೆಂದು ಹಾಗೂ ಶಾಲಾ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಅಂಕಗಳನ್ನು (2ನೇ ಪುಟಕ್ಕೆ)

## ಶೀಘ್ರ ಬಿಜೆಪಿ ಅವಧಿಯ ಅಕ್ರಮ ನಿವೇಶನಗಳ ಪಟ್ಟಿ ಬಿಡುಗಡೆ

ಬೆಂಗಳೂರು, ಜು. 25 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಿಂದಿನ ಬಿಜೆಪಿ ಆಡಳಿತದಲ್ಲಿ ಅಕ್ರಮವಾಗಿ ನಿವೇಶನಗಳ ವಿತರಣೆ ಆಗಿರುವ ಬಗ್ಗೆ ಸರ್ಕಾರ ಶೀಘ್ರದಲ್ಲೇ ಪಟ್ಟಿ ಬಿಡುಗಡೆ ಮಾಡಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ತನಿಖೆಗೆ ಆದೇಶಿಸಿದ್ದಾರೆ. ಈ ಬಗ್ಗೆ ಯಾವುದಾದರೂ ದಾಖಲಾತಿ ಸಾಕ್ಷಿಗಳಿದ್ದರೆ ಪ್ರತಿಪಕ್ಷಗಳು ಒದಗಿಸಲಿ ಎಂದು ಹೇಳಿದರು. ಏನಾದರೂ ಅವ್ಯವಹಾರ ನಡೆದಿದ್ದರೆ ಅದು ಬಿಜೆಪಿ ಆಡಳಿತದಲ್ಲೇ ಆಗಿದೆ. ತನಿಖೆ ಮುಂದುವರಿಯುತ್ತಿದೆ, ಬಿ.ಎಸ್. ಯಡಿಯೂರಪ್ಪ (2ನೇ ಪುಟಕ್ಕೆ)

## ಮಲೆನಾಡಿನಲ್ಲಿ ಮತ್ತೆ ಮಳೆ ತುಂಗಾ, ಭದ್ರಾ ಒಳ ಹರಿವು ಹೆಚ್ಚಳ

ಶಿವಮೊಗ್ಗ, ಜು.25 - ಮಲೆನಾಡಿನಲ್ಲಿ ಬಿಡುವು ನೀಡಿದ್ದ ಮುಂಗಾರು ಮಳೆ ಬುಧವಾರದಿಂದ ಮತ್ತೆ ಆರಂಭವಾಗಿದ್ದು, ತುಂಗ ಮತ್ತು ಭದ್ರಾ ನದಿಯಲ್ಲಿ ನೀರಿನ ಹರಿವು ಗುರುವಾರ ಮತ್ತೆ ಏರಿಕೆಯಾಗಿದೆ. ಗಾಜನೂರಿನ ತುಂಗಾ ಜಲಾಶಯಕ್ಕೆ ಗುರುವಾರ ಬೆಳಗ್ಗೆ 28 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಸಂಜೆ 67 ಸಾವಿರ ಕ್ಯೂಸೆಕ್ಸ್ ಗೆ ಏರಿಕೆ ಕಂಡಿದ್ದು ಅಷ್ಟೇ ಪ್ರಮಾಣದ ನದಿಗೆ ಹರಿಸಲಾಗುತ್ತಿದೆ. ಇದರಿಂದಾಗಿ ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಮತ್ತೆ ಹೆಚ್ಚಾಗಿದೆ.

**ಭದ್ರಾ ಒಳ ಹರಿವೂ ಹೆಚ್ಚಳ :** ಭದ್ರಾ ಜಲಾಶಯಕ್ಕೆ ಬುಧವಾರ 15 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಗುರುವಾರ ಬೆಳಗ್ಗೆ 26 ಸಾವಿರ ಮತ್ತು ಸಂಜೆ ವೇಳೆಗೆ 35 ಸಾವಿರ ಕ್ಯೂಸೆಕ್ಸ್‌ಗೆ ಏರಿಕೆ ಕಂಡಿದೆ (2ನೇ ಪುಟಕ್ಕೆ)

### 22 ಕೆರೆಗಳ ಏತ ನೀರಾವರಿ ಯೋಜನೆ ಕಳಪೆ : ಶಾಸಕ ಬಸವಂತಪ್ಪ ಆರೋಪ

## ಹೊಸ ಪೈಪ್ ಲೈನ್ ಕಾಮಗಾರಿಗೆ ಮನವಿ



### ಹೊಸ ಪೈಪ್ ಲೈನ್ ಕಾಮಗಾರಿ ನಡೆಸಲು ಉಪಮುಖ್ಯಮಂತ್ರಿ ಡಿಕೆಶಿ ಸಕಾರಾತ್ಮಕ ಸ್ಪಂದನೆ

ದಾವಣಗೆರೆ, ಜು. 25 - ಕಳಪೆ ಕಾಮಗಾರಿಯಿಂದ 22 ಕೆರೆಗಳ ಏತ ನೀರಾವರಿ ಯೋಜನೆ ವಿಫಲಗೊಂಡಿದ್ದು, ಕೂಡಲೇ ಹೊಸ ಪೈಪ್ ಲೈನ್ ಕಾಮಗಾರಿ ನಡೆಸಿ ಕೆರೆಗಳಿಗೆ ನೀರು ತುಂಬಿಸಿ ರೈತರಿಗೆ ನೆರವಾಗಬೇಕೆಂದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಒತ್ತಾಯಿಸಿದರು.

ಬೆಂಗಳೂರಿನ ವಿಧಾನಸೌದ ಮೂರನೇ ಮಹಡಿಯಲ್ಲಿರುವ ಸಮ್ಮೇಳನದ ಸಭಾಂಗಣದಲ್ಲಿ ಗುರುವಾರ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಭದ್ರಾ ಮತ್ತು ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ಶಾಸಕರ ಸಭೆಯಲ್ಲಿ ಶಾಸಕ ಬಸವಂತಪ್ಪ ಈ ವಿಷಯ ಪ್ರಸ್ತಾಪಿಸಿದರು.

22 ಕೆರೆಗಳ ಏತ ನೀರಾವರಿ ಯೋಜನೆಯನ್ನು ಎಲ್ ಅಂಡ್ ಟಿ ಕಂಪನಿಗೆ ಟೆಂಡರ್ ನೀಡಲಾಗಿತ್ತು. ಆದರೆ ಕಳಪೆ ಕಾಮಗಾರಿಯಿಂದ ಈ ಯೋಜನೆ ವ್ಯಾಪ್ತಿಯ ಕೆರೆಗಳಿಗೆ ಈವರೆಗೂ ನೀರು ತುಂಬುತ್ತಿಲ್ಲ. ಇದರ ಪರಿಣಾಮ ಕಳೆದ ವರ್ಷ ಭೀಕರ ಬರಗಾಲ ಸಂಭವಿಸಿ ರೈತರು ಅಡಕೆ ತೋಟಗಳನ್ನು ಉಳಿಸಿಕೊಳ್ಳಲು ಹರಸಾಹಸ ಪಟ್ಟರು. ಜೊತೆಗೆ ಜನರ ಕುಡಿಯುವ ನೀರಿಗೂ ಬಹಳ ತೊಂದರೆ ಅನುಭವಿಸಿದರು.

ಹೀಗಾಗಿ ನೀರಾವರಿ ನಿಗಮದಲ್ಲಿ ಉಳಿದಿರುವ 18 ಕೋಟಿ ರೂ. ಜೊತೆಗೆ ಹೆಚ್ಚುವರಿ 50 ಕೋಟಿ ಅನುದಾನ ನೀಡಿ ಹೊಸದಾಗಿ ಪೈಪ್ ಲೈನ್ ಮಾಡಿ ಕೆರೆಗಳನ್ನು ತುಂಬಿಸಲು ಅನುಕೂಲ ಕಲ್ಪಿಸಬೇಕೆಂದು ಸಚಿವ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದರು.

ಶಾಸಕ ಬಸವಂತಪ್ಪ ಅವರ ಮಾತಿಗೆ ಸಾಥ್ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಕಳಪೆ ಕಾಮಗಾರಿಯಿಂದ 22 ಕೆರೆಗಳ ಏತ ನೀರಾವರಿ ಯೋಜನೆ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬುತ್ತಿಲ್ಲ. (2ನೇ ಪುಟಕ್ಕೆ)

## ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೆ ಹೊಸ ಡಿಪಿಆರ್ ಸಿದ್ದಪಡಿಸಲು ಸಿಎಂ ಆದೇಶ

ಬೆಂಗಳೂರು, ಜು.25- ಹರಿಹರ ತಾಲ್ಲೂಕಿನ ಮಹತ್ವಾಕಾಂಕ್ಷೆಯ ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೊಳಿಸಲು ಯೋಜನೆಯ ಪೂರ್ಣ ಡಿಪಿಆರ್ ಸಿದ್ದಪಡಿಸಿ, ವರದಿ ಸಲ್ಲಿಸುವಂತೆ ಮತ್ತು ಅದಕ್ಕಾಗಿ 2.15 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶ ನೀಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರೊಂದಿಗೆ ಇಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಭೈರನಪಾದ ಏತ ನೀರಾವರಿ ಯೋಜನೆ, ಹರಿಹರ ತಾಲ್ಲೂಕಿನ ರೈತರಿಗೆ ತುಂಬಾ ಅಗತ್ಯವಿದ್ದು, ಯೋಜನೆಗೆ ಪ್ರಸಕ್ತ ಸಾಲಿನ ದರಪಟ್ಟಿಗೆ ಅನುಗುಣವಾಗಿ ಅಂದಾಜನ್ನು ಪರಿಷ್ಕರಿಸಿ, ಆಡಳಿತಾತ್ಮಕ ಮಂಜೂರಾತಿ ನೀಡುವುದರ ಜೊತೆಗೆ ಅನುದಾನ ಬಿಡುಗಡೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದಾಗ, ಸಿಎಂ ಪೂರಕ ಸ್ಪಂದನೆ ನೀಡಿದ್ದಾರೆ ಎಂದು ಶ್ರೀನಿವಾಸ್ 'ಜನತಾವಾಣಿ'ಗೆ ಮಾಹಿತಿ ನೀಡಿದರು.



**ಹಿನ್ನೆಲೆ :** ಮಲೇಬೆನ್ನೂರು ಶಾಖಾ ನಾಲೆಯಡಿ ಬರುವ 1632 ಹೆಕ್ಟೇರ್ ಬಾಧಿತ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರು ಒದಗಿಸುವ ಹಿತದೃಷ್ಟಿಯಿಂದ ಅಂದು ಶಾಸಕರಾಗಿದ್ದ ಬಿ.ಪಿ. ಹರೀಶ್ ಅವರು, 2013ರಲ್ಲಿ ಗೋವಿನಹಾಳ್ ಸಮೀಪ ತುಂಗಭದ್ರಾ ನದಿಯಿಂದ ಭೈರನಪಾದ ಏತ ನೀರಾವರಿ ಯೋಜನೆಗೆ 43.75 ಕೋಟಿ ವೆಚ್ಚಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದಿದ್ದರು. ಆದರೆ, ತಾಂತ್ರಿಕ ಸಲಹಾ ಸಮಿತಿ ಅನುಮತಿ ಸಿಗದ ಕಾರಣ ಮತ್ತು ಸರ್ಕಾರ ಅನುದಾನ ನೀಡದ ಕಾರಣ, ಈ ಯೋಜನೆ ನೆನೆಗುದಿಗೆ ಬಿದ್ದಿತು.

ನಂತರ, ಶಾಸಕ ಎಸ್.ರಾಮಪ್ಪ ಅವರು ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಒತ್ತಡ ಹಾಕಿ, ಕರ್ನಾಟಕ ನೀರಾವರಿ ನಿಗಮದ 101ನೇ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಈ ಯೋಜನೆಯನ್ನು 58.13 ಕೋಟಿ ರೂ.ಗಳಿಗೆ ಪರಿಷ್ಕರಿಸುವಂತೆ ಮಾಡಿದ್ದರು.

ತಾಂತ್ರಿಕ ಸಲಹಾ ಸಮಿತಿ ತೀರ್ಮಾನ ಪ್ರಕಾರ ಸರ್ಕಾರಕ್ಕೆ ಪರಿಷ್ಕೃತ ಅಂದಾಜು ಪಟ್ಟಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಜೊತೆಗೆ ಅನುದಾನ ಬಿಡುಗಡೆ ಮಾಡುವಂತೆ ಶಿಫಾರಸ್ಸು ಮಾಡಲಾಗಿತ್ತು. ಯೋಜನೆಯ ನಂತರ ಬಂದ ಸರ್ಕಾರಕ್ಕೆ ಯೋಜನೆಯ ಪರಿಷ್ಕೃತ ಪಟ್ಟಿಗೆ ಅನುಮೋದನೆ ಹಾಗೂ ಅನುದಾನ ನೀಡುವಂತೆ ಎಸ್.ರಾಮಪ್ಪ ಅವರು ಸಾಕಷ್ಟು ಒತ್ತಾಯ ಮಾಡುವುದರ ಜೊತೆಗೆ ವಿಧಾನಸಭೆಯಲ್ಲೂ ವಿಷಯ ಮಂಡನೆ ಮಾಡಿ, ಸರ್ಕಾರದ ಗಮನ ಸೆಳೆದಿದ್ದರು. ಆಗ ಸರ್ಕಾರ ಭರವಸೆ ನೀಡಿ, ಸುಮ್ಮನಾಯಿತು.

ನಂತರ ಈ ವಿಷಯ ಕಳೆದ ವರ್ಷ ನಡೆದ, ವಿಧಾನಸಭೆ ಚುನಾವಣೆ ಮತ್ತು ಇತ್ತೀಚೆಗೆ ನಡೆದ, ಲೋಕಸಭಾ ಚುನಾವಣೆಯಲ್ಲಿ ಸಾಕಷ್ಟು ಪ್ರಚಾರ (4ನೇ ಪುಟಕ್ಕೆ)

# ಒಂದು ರಾಷ್ಟ್ರ - ಒಂದು ಚುನಾವಣೆ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ

ಬೆಂಗಳೂರು, ಜು. 25 - 'ಒಂದು ರಾಷ್ಟ್ರ ಒಂದು ಚುನಾವಣೆ' ವ್ಯವಸ್ಥೆ ವಿರೋಧಿಸುವ ನಿರ್ಣಯವನ್ನು ಪ್ರತಿಪಕ್ಷ ಬಿಜೆಪಿ ಹಾಗೂ ಜೆಡಿಎಸ್ ಪ್ರತಿಭಟನೆ ನಡುವೆಯೂ ವಿಧಾನಸಭೆಯಲ್ಲಿಂದು ಅಂಗೀಕರಿಸಲಾಯಿತು.

ಬಿಜೆಪಿ ಮತ್ತು ಜೆಡಿಎಸ್ ಶಾಸಕರು, ಮೈಸೂರಿನ ಮುಡಾದಲ್ಲಿನ ನಿವೇಶನ ಹಂಚಿಕೆ ಹಗರಣ ಕುರಿತ ಚರ್ಚೆಗೆ ಒತ್ತಾಯಿಸಿ ಧರಣಿ ನಡೆಸುತ್ತಿದ್ದ ವೇಳೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್, ನಿರ್ಣಯ ಮಂಡಿಸಿದರು.

ಭಾರತ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ, ಭಾರತೀಯ ಸಂವಿಧಾನ ಭಾಗ 7ರಲ್ಲಿ ಪ್ರತಿಪಾದಿಸಿರುವ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ತತ್ವ ಪ್ರಜಾಪ್ರಭುತ್ವದ ಆತ್ಮವಾಗಿದೆ, 'ಒಂದು ರಾಷ್ಟ್ರ ಒಂದು ಚುನಾವಣೆ' ಪ್ರಸ್ತಾಪ ಭಾರತದ ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ವ್ಯವಸ್ಥೆಗೆ ಅಪಾಯ ಉಂಟು ಮಾಡುತ್ತದೆ.

ವಿವಿಧ ರಾಜ್ಯಗಳ ವಿಧಾನಸಭೆಗಳ ಅಧಿಕಾರಾವಧಿ ಬೇರೆ ಬೇರೆಯಾಗಿರುತ್ತವೆ, ದೇಶಾದ್ಯಂತ ಏಕರೂಪ ಚುನಾವಣಾ ವೇಳಾಪಟ್ಟಿ ರಾಷ್ಟ್ರೀಯ ವಿಷಯಗಳ ಮೇಲೆ ಕೇಂದ್ರೀಕರಿಸುವ ಮತ್ತು ಸ್ಥಳೀಯ ಕಾಳಜಿಗಳನ್ನು ನಿರ್ಲಕ್ಷಿಸುವ ಸಾಧ್ಯತೆ ಇರುವುದರಿಂದ ರಾಜ್ಯಗಳ ಸ್ವಾಯತ್ತತೆ ದುರ್ಬಲಗೊಳ್ಳಲಿದೆ.

ಭದ್ರತೆ ಖಚಿತಪಡಿಸಿಕೊಳ್ಳುವ, ಚುನಾವಣಾ ಸಿಬ್ಬಂದಿ ನಿರ್ವಹಣೆ, ಸರ್ಕಾರದ ಉತ್ತರದಾಯಿತ್ವ, ಆರ್ಥಿಕ ಮತ್ತು ಸಾಮಾಜಿಕ ಅಡೆತಡೆಗಳು ಏಕಕಾಲಿಕ ಚುನಾವಣೆಗಳಿಗೆ ಸಂಬಂಧಿ ಸಿದ ಗುರುತರ ಗಂಡಾಂತರಗಳಾಗಿವೆ.

ಭಾರತದ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳು ಮತ್ತು ಒಕ್ಕೂಟ ಸಮಗ್ರತೆ ರಕ್ಷಿಸಲು ಏಕಕಾಲಿಕ ಚುನಾವಣಾ ನೀತಿ ಅನುಷ್ಠಾನಗೊಳಿಸಬಾರದು ಎಂದು ಕೇಂದ್ರ ಸರ್ಕಾರವನ್ನು ಸದನ ಆಗ್ರಹಿಸುತ್ತದೆ ಎಂದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿ ವರದಿ ಪಡೆದು ನಂತರ 'ಒಂದು ರಾಷ್ಟ್ರ ಒಂದು ಚುನಾವಣೆ' ವ್ಯವಸ್ಥೆ ರೂಪಿಸಲು ಮುಂದಾಗಿದೆ ಎಂದರು.

ಏಕಕಾಲಿಕ ಚುನಾವಣೆ ವ್ಯವಸ್ಥೆಯಿಂದ ಸಮಯ, ಜನರ ತೆರಿಗೆ ಹಣ, ಮಾನವ ಸಂಪನ್ಮೂಲ ಉಳಿತಾಯವಾಗಲಿದ್ದು, ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೂ ಪೂರಕ ವಾತಾವರಣ ನಿರ್ಮಾಣವಾಗಲಿದೆ. ರಾಜ್ಯ ಸರ್ಕಾರದ ನಿರ್ಣಯವನ್ನು ವಿರೋಧಿಸುತ್ತೇವೆ, ಇದು ಸರ್ವಾನುಮತದ ನಿರ್ಣಯ ಎಂಬುದಕ್ಕೆ ಪ್ರತಿಪಕ್ಷಗಳ ಸಹಮತ ಇಲ್ಲ ಎಂದು ಸ್ಪಷ್ಟಪಡಿಸಿದರು.

ನಂತರ ಸಭಾಧ್ಯಕ್ಷ ಯು.ಟಿ.ಖಾದರ್, ನಿರ್ಣಯ ಸರ್ವಾನುಮತ ದಿಂದ ಅಂಗೀಕಾರಗೊಂಡಿದೆ ಎಂದು ಪ್ರಕಟಿಸಿದರು.

# ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿ ಇದ್ದರೂ ಸಾರ್ವಜನಿಕರಿಗೆ ಪ್ರತ್ಯೇಕ ಖಾಸಗಿ ಔಷಧಿ ಅಂಗಡಿಗೆ ಬರೆಯುವ ವೈದ್ಯರು!

## ಹರಿಹರದಲ್ಲಿ ಜಯ ಕರ್ನಾಟಕ ಸಂಘಟನೆಯಿಂದ ಆರೋಗ್ಯ ಅಧಿಕಾರಿಗಳಿಗೆ ಮನವಿ



ಹರಿಹರ, ಜು.25- ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿನ ವೈದ್ಯರುಗಳ ಬಳಿ ಚಿಕಿತ್ಸೆ ಪಡೆಯಲು ಬರುವ ರೋಗಿಗಳಿಗೆ ಚಿಕಿತ್ಸೆ ನೀಡಿ ಆಸ್ಪತ್ರೆಯಲ್ಲಿ ಔಷಧಿಗಳು ಇದ್ದರೂ ಸಹ ಔಷಧಿಗಳನ್ನು ಪ್ರತ್ಯೇಕ ಔಷಧಿ (ಖಾಸಗಿ) ಅಂಗಡಿಗಳಿಂದ ತರಲು ಚೀಟಿಯನ್ನು ಬರೆದುಕೊಡುತ್ತಿ ದ್ದಾರೆ ಎಂದು ಆರೋಪಿಸಿ, ಜಯಕರ್ನಾಟಕ ಸಂಘಟನೆಯ ವತಿಯಿಂದ ಪ್ರತಿಭಟನೆ ನಡೆಸಿ, ಆರೋಗ್ಯ ಅಧಿಕಾರಿಗಳಾದ ಡಾ.ಹನುಮನಾಯ್ಕ್ ಮತ್ತು ಡಾ. ಅಬ್ದುಲ್ ಖಾದರ್ ಅವರಿಗೆ ಮನವಿ ಅರ್ಪಿಸಿದರು.

ಈ ವೇಳೆ ಜಯಕರ್ನಾಟಕ ಸಂಘಟನೆಯ ಅಧ್ಯಕ್ಷ ಎ.ಗೋವಿಂದ ಮಾತನಾಡಿ, ಸಾರ್ವಜನಿಕ ಆಸ್ಪತ್ರೆಗೆ ಬರುವ ರೋಗಿಗಳಿಗೆ ಖಾಸಗಿ ಔಷಧಿ ಅಂಗಡಿಗಳಲ್ಲಿ ಔಷಧಿ ಪಡೆಯುವಂತೆ ಚೀಟಿ ನೀಡುವುದರಿಂದ ಸರ್ಕಾರಿ ಆಸ್ಪತ್ರೆಯನ್ನು ಅವಲಂಬಿಸಿಕೊಂಡು ನಂಬಿ ಬರುವ ಬಡ ರೋಗಿಗಳಿಗೆ ತೊಂದರೆ ಉಂಟಾಗುತ್ತಿದೆ. ಅದರಲ್ಲಿ ಆರ್ಥಿಕವಾಗಿ ಕಡು ಬಡವರಾಗಿದ್ದು, ಕೂಲಿ ಮಾಡಿಕೊಂಡು ಗ್ರಾಮಾಂತರ ಪ್ರದೇಶದಿಂದ ತಮ್ಮ ಸ್ವಂತ ಖರ್ಚಿನಲ್ಲಿ ಬರುವ ರೋಗಿಗಳು ಹಾಗೂ ನಗರದಲ್ಲಿರುವ ಸಾರ್ವಜನಿಕರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಬಂದಂತ ರೋಗಿಗಳಿಗೆ ಅಸಮಾಧಾನ ಉಂಟಾಗಿದೆ.

ಆದ್ದರಿಂದ ಈ ಕೂಡಲೇ ಸರ್ಕಾರಿ ಆಸ್ಪತ್ರೆಯಲ್ಲಿ ಎಲ್ಲಾ ಔಷಧಿಗಳ ಲಭ್ಯತೆ ದೊರೆಯುವಂತೆ ಆಗಬೇಕು ಹಾಗೂ ಜನ ಔಷಧಿ ಕೇಂದ್ರದಲ್ಲಿ ವ್ಯವಸ್ಥಿತವಾದ ಔಷಧಿಗಳನ್ನು ದೊರಕುವಂತೆ ಆಗಬೇಕು ಮತ್ತು ಗರ್ಭಿಣಿಯರಿಗೆ ಸ್ಕ್ಯಾನಿಂಗ್ ವ್ಯವಸ್ಥೆ ಇರುವುದಿಲ್ಲ ಹಾಗೂ ಥೈರಾಯ್ಡ್ ಟೆಸ್ಟಿಂಗ್ ಇರುವುದಿಲ್ಲ ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು, ತಕ್ಷಣವೇ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಔಷಧಿಗಳನ್ನು ದೊರಕುವಂತೆ ಮಾಡಬೇಕು.

ಯಾವುದೇ ರೋಗಿಗೆ ಹೊರಗಡೆಯಿಂದ ಔಷಧಿಗಳನ್ನು ತರುವಂತೆ ಚೀಟಿ ಬರೆದುಕೊಟ್ಟಲ್ಲಿ, ಔಷಧಿಗಳ ವೆಚ್ಚವನ್ನು ಆರೋಗ್ಯ ಇಲಾಖೆ ತುಂಬಿಕೊಡಬೇಕು ಹಾಗೂ ಸ್ಕ್ಯಾನಿಂಗ್ ಮತ್ತು ಥೈರಾಯ್ಡ್ ರಕ್ತ ಪರೀಕ್ಷೆ ವ್ಯವಸ್ಥೆಯನ್ನು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿ ಕಲ್ಪಿಸಿ ಕೊಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಯ ಕರ್ನಾಟಕ ಸಂಘಟನೆ ಉಪಾಧ್ಯಕ್ಷ ಎಂ.ಆರ್. ಆನಂದ್, ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್, ಶಬರೀಶ್, ಸಿ.ಹೆಚ್.ಗ್ರಾಮ ಘಟಕದ ಅಧ್ಯಕ್ಷ ಭರತ್ ಭಾನುವಳ್ಳಿ, ವಿದ್ಯಾರ್ಥಿ ಘಟಕದ ಅಧ್ಯಕ್ಷ ಶ್ರೀನಿವಾಸ್, ದಾದಾಪೀರ್, ಯೋಗೀಶ್, ಆದರ್ಶ್, ಸುದೀಪ್, ಮಹಾರುದ್ರ, ರಿಯಾಜ್, ರವಿ, ಪ್ರದೀಪ್, ಗಿರಿ, ಹನುಮಂತ ಹಾಗೂ ಇತರರು ಉಪಸ್ಥಿತರಿದ್ದರು.

# ಪ್ಯಾನಿಕ್ ಬಟನ್, ಜಿಪಿಎಸ್ ವ್ಯವಸ್ಥೆ ಕೈಬಿಡಲು ಆಗ್ರಹಿಸಿ ಪ್ರತಿಭಟನೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಜು. 25 - ರಾಜ್ಯದಲ್ಲಿ ಟ್ಯಾಕ್ಸಿಗಳಿಗೆ ಅಳವಡಿಸಲು ಸೂಚಿಸಿರುವ ಪ್ಯಾನಿಕ್ ಬಟನ್ ಹಾಗೂ ಜಿಪಿಎಸ್ ವ್ಯವಸ್ಥೆ ಕೈಬಿಡುವಂತೆ ಆಗ್ರಹಿಸಿ ನಗರದ ಹಳೇ ಪಿ.ಬಿ.ರಸ್ತೆ ಶ್ರೀ ವಿನಾಯಕ ಕಾರು ಚಾಲಕರ ಮತ್ತು ಮಾಲೀಕರ ಸಂಘದ ಸದಸ್ಯರು ಗುರುವಾರ ನಗರದಲ್ಲಿ ಪ್ರತಿಭಟಿಸಿ, ಎ.ಆರ್.ಟಿ.ಓ ಕಛೇರಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಇಲ್ಲಿನ ಕೆಇಬಿ ವಿನಾಯಕ ದೇವಸ್ಥಾನದ ಬಳಿಯಿಂದ ಪ್ರತಿಭಟನಾ ಮೆರವಣಿಗೆ ಕೈಗೊಂಡು ಬಸ್‌ಸ್ಟ್ಯಾಂಡ್ ಸರ್ಕಲ್, ಹಲಗೇರಿ ಕ್ರಾಸ್, ಕುರುಬಗೇರಿ ಕ್ರಾಸ್ ಮಾರ್ಗವಾಗಿ ಎಆರ್‌ಟಿಒ ಕಚೇರಿಗೆ ತೆರಳಿದರು. ದಾರಿಯುದ್ದಕ್ಕೂ ಪ್ರತಿಭಟನಾಕಾರರು ಸರ್ಕಾರದ ಕ್ರಮ ಖಂಡಿಸಿ ಘೋಷಣೆಗಳನ್ನು ಕೂಗಿದರು.

ಚಾಲಕರು ಮತ್ತು ಮಾಲಿಕರು ತುಂಬಾ ತೊಂದರೆ ಅನುಭವಿಸುತ್ತಿದ್ದು, ರಾಜ್ಯ ಸರ್ಕಾರ ಸೂಚಿಸಿರುವಂತೆ ಪ್ಯಾನಿಕ್ ಬಟನ್ ಹಾಗೂ ಜಿಪಿಎಸ್ ವ್ಯವಸ್ಥೆ ಅಳವಡಿಸುವ ಮೊತ್ತವನ್ನು ಭರಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರದ ಈ ವ್ಯವಸ್ಥೆಯು ಯಾವುದೇ ರೀತಿಯಲ್ಲಿ ಅನುಕೂಲಕರವಾಗಿರುವುದಿಲ್ಲ. ಆದ್ದರಿಂದ ಸರ್ಕಾರ ತತ್‌ಕ್ಷಣದಿಂದ ಈ ವ್ಯವಸ್ಥೆಯನ್ನು ಕೈಬಿಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಸಂಘನೆಯ ಅಧ್ಯಕ್ಷ ರವಿಕುಮಾರ ಕಬ್ಬಾರ, ಉಪಾಧ್ಯಕ್ಷ ಶ್ರೀನಿವಾಸ, ಕಾರ್ಯದರ್ಶಿ ದಿಲೀಪ ದೊಡ್ಮನಿ, ಬಾಬು ಹೊಳಿಯಮ್ಮನವರ, ಸುರೇಶ ಹೊಸರಿತ್ತಿ, ಹರೀಶ ಕಂಬಳಿ, ಬಸಣ್ಣ ಜಲ್ಲೇರ, ಶಿವಾನಂದ ಹಂಚಿನಾಳ, ನಿಂಗರಾಜ ಮುನಿಯನಕೊಪ್ಪ, ಬೀರಪ್ಪ ಕುರಬರ, ನೀಲಪ್ಪ ಹೂಲಿಹಳ್ಳಿ ಮತ್ತು ಸರ್ವ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಸ್ವಚ್ಛ ಭಾರತ್ ಮಿಷನ್: ಅರ್ಜಿ ಆಹ್ವಾನ

ದಾವಣಗೆರೆ, ಜು.25- ಸ್ವಚ್ಛ ಭಾರತ್ ಮಿಷನ್ 2.0 ರ ಅಡಿಯಲ್ಲಿ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪು ಎಸ್‌ಹೆಚ್‌ಜಿ, ಸರ್ಕಾರೇತರ ಸಂಸ್ಥೆ ಎನ್‌ಜಿಓ ಸದಸ್ಯರ ನೇಮಕಾತಿಗಾಗಿ ಆಸಕ್ತಿಯುಳ್ಳ ಸದಸ್ಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಯ್ಕೆ ಪ್ರಕ್ರಿಯೆ ಮತ್ತು ವೇತನಕ್ಕೆ ಸಂಬಂಧಿಸಿದ ವಿವರಗಳು www.davanagerecity.mrc.gov.in ಅಂತರ್ಜಾಲ ತಾಣದಲ್ಲಿ ಲಭ್ಯವಿರುತ್ತದೆ. ಆಸಕ್ತರು ಆಗಸ್ಟ್ 2ರೊಳಗೆ ಪಾಲಿಕೆ ಕಚೇರಿಗೆ ತಲುಪಿಸುವಂತೆ ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.

ಚಿತ್ರ : ಜಿಗಳಿ ಪ್ರಕಾಶ್




**ಕಳೆದ 10-15 ದಿನಗಳಿಂದ ಬೀಳುತ್ತಿರುವ ಮುಂಗಾರು ಮಳೆಯಿಂದಾಗಿ ಕೊಮಾರನಹಳ್ಳಿ ಮತ್ತು ಕೊಪ್ಪ ಸಮೀಪದ ಗುಡ್ಡಗಳು ಹಸಿರಿನಿಂದ ಕಂಗೊಳಿಸುತ್ತಿದ್ದು, ರಸ್ತೆ ಪ್ರಯಾಣಿಕರ ಕಣ್ಮನ ಸೆಳೆಯುತ್ತಿವೆ...**

# ಪ್ರವೀಣ್ ಕಮ್ಮಾರ್‌ಗೆ ಪಿಹೆಚ್‌ಡಿ



ದಾವಣಗೆರೆ, ಜು. 25 - ನಗರದ ಮಹಿಳಾ ಸೇವಾ ಸಮಾಜ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಎ.ವಿ. ಕಮಲಮ್ಮ ಕಾಲೇಜಿನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕ ಪ್ರವೀಣ್ ಕಮ್ಮಾರ ಅವರು ತಮಿಳುನಾಡಿನ ಅಣ್ಣಾಮಲೈ ಯೂನಿವರ್ಸಿಟಿಯಿಂದ ಪಿಹೆಚ್‌ಡಿ ಪದವಿ ಪಡೆದಿದ್ದಾರೆ.

ಅಣ್ಣಾಮಲೈ ಯೂನಿವರ್ಸಿಟಿಯ ಡಾ. ಕೆ. ರಾಮು ಅವರ ಮಾರ್ಗದರ್ಶನದಲ್ಲಿ 'ಎಕಾನಾಮಿಕ್ ಅನಾಲಿಸಿಸ್ ಆಫ್ ಆಕ್ಯುಪೇಷನಲ್ ಹೆಲ್ತ್ ಹಜಾರ್ಡ್ಸ್ ಆಫ್ ಅಗ್ರಿಕಲ್ಚರ್ ಲೇಬರ್ ಇನ್ ದಾವಣಗೆರೆ ಡಿಸ್ಟ್ರಿಕ್ಟ್ ಕರ್ನಾಟಕ' ವಿಷಯ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಪ್ರವೀಣ್ ಅವರಿಗೆ ಪಿಹೆಚ್‌ಡಿ ಪದವಿ ಲಭಿಸಿದೆ.

ಪ್ರವೀಣ್ ಕಮ್ಮಾರ, ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಇನಾಂ ಲಕ್ಮಾಪುರ ಗ್ರಾಮದ ನಿಂಗಪ್ಪ, ಗಂಗಮ್ಮ ದಂಪತಿ ಪುತ್ರ.

# ತೆರಿಗೆಗೆ ರಾಜ್ಯಗಳಿಗೆ ಅಧಿಕಾರ

**(1ನೇ ಪುಟದಿಂದ)** ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ 9 ಸದಸ್ಯರ ಪೀಠ 8-1ರ ಬಹುಮತದಿಂದ ತೀರ್ಪು ನೀಡಿದೆ. ತೀರ್ಪು ಪೂರ್ವಾನ್ವಯಗೊಳಿಸುವ ಸಂಬಂಧ ಕೇಂದ್ರ ಹಾಗೂ ರಾಜ್ಯಗಳು ಲಿಖಿತ ವಿವರ ಸಲ್ಲಿಸಬೇಕು, ಈ ಬಗ್ಗೆ ಜುಲೈ 31ರಂದು ನಿರ್ಧರಿಸಲಾಗುವುದು ಎಂದು ಪೀಠ ತಿಳಿಸಿದೆ.

ಬಹುಮತದ ತೀರ್ಪನ್ನು ಓದಿದ ಚಂದ್ರಚೂಡ್, ಸಂವಿಧಾನದ ಎರಡನೇ ಪಟ್ಟಿಯಲ್ಲಿರುವ 50ನೇ ಅಂಶದ ಅನ್ವಯ ಖನಿಜಗಳ ಹಕ್ಕಿನ ಮೇಲೆ ತೆರಿಗೆ ಹೇರಲು ಸಂಸತ್ತಿಗೆ ಅಧಿಕಾರ ಇಲ್ಲ ಎಂದು ಹೇಳಿದೆ.

ರಾಯಧನವನ್ನು ತೆರಿಗೆ ಎಂದು ಪರಿಗಣಿಸಿದ 1989ರ ಏಳು ನ್ಯಾಯಮೂರ್ತಿಗಳ ಸುಪ್ರೀಂ ಕೋರ್ಟ್ ಸಂವಿಧಾನ ಪೀಠ ನೀಡಿರುವ ತೀರ್ಪು ಸರಿಯಲ್ಲ ಎಂದು ಚಂದ್ರಚೂಡ್ ಹೇಳಿದ್ದಾರೆ.

ರಾಯಧನವು ತೆರಿಗೆ ಸ್ವರೂಪದ್ದಲ್ಲ. ಗಣಿ ಗುತ್ತಿಗೆ ಪಡೆದವರು ಒಪ್ಪಂದದ ಸ್ವರೂಪದಲ್ಲಿ ರಾಯಧನ ನೀಡುತ್ತಾರೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ.

# ತುಂಗ - ಭದ್ರಾ ಹೆಚ್ಚಳ



**(1ನೇ ಪುಟದಿಂದ)** ಎನ್ನಲಾಗಿದೆ. ಗುರುವಾರ ಸಂಜೆ ಜಲಾಶಯದ ನೀರಿನ ಮಟ್ಟ 173 ಅಡಿ ದಾಟಿದ್ದು, ಕಳೆದ ವರ್ಷಕ್ಕಿಂತ 21 ಅಡಿ ನೀರು ಹೆಚ್ಚು ಸಂಗ್ರಹವಾಗಿದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 152 ಅಡಿ ನೀರಿತ್ತು. ಜಲಾಶಯದ ಗರಿಷ್ಠ ಮಟ್ಟ 186 ಅಡಿಗಳಾಗಿದ್ದು, ಜಲಾಶಯ ಭರ್ತಿಗೆ 13 ಅಡಿ ಮಾತ್ರ ಬಾಕಿ ಇದೆ.

# ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆ



ದಾವಣಗೆರೆ, ಜು. 25 - 2024-25ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯ 30ನೇ ವಾರ್ಡ್ ಆವರಗೆರೆ ಮನೆ-ಮನೆಗೆ ತೆರಳಿ ಇಂದು ಸರ್ವೆ ನಡೆಸಲಾಯಿತು.

ಮಹಾನಗರ ಪಾಲಿಕೆ ಯಿಂದ ಈ ಕಾರ್ಯಕ್ರಮ ಏರ್ಪಾಡಾಗಿದ್ದು, ಆವರಗೆರೆಯ ಬಸವನಗೌಡ ಬಡಾವಣೆಯಲ್ಲಿ ನಡೆದ ಸರ್ವೇ ಕಾರ್ಯಕ್ಕೆ 30ನೇ ವಾರ್ಡಿನ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ್ ಮತ್ತು ಕಂದಾಯ ಪರಿವೀಕ್ಷಕರೂ ಆಗಿರುವ ನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ಚಾಲನೆ ನೀಡಿದರು.

ಪಾಲಿಕೆಯ ಆರೋಗ್ಯ ಶಾಖೆಯ ಲೋಹಿತ್, ಹಾಲೇಶ್, ಈ ಭಾಗದ ಮುಖಂಡ ಗೋಪಿನಾಯ್ಕ್ ಮತ್ತಿತರರು ಸರ್ವೇ ಕಾರ್ಯದಲ್ಲಿ ಭಾಗವಹಿಸಿದ್ದರು.

# ಹೆದ್ದಾರಿ : ಗುಂಡಿ ಮುಚ್ಚುವ ಕೆಲಸ ಆರಂಭ



**'ಜನತಾವಾಣಿ' ವರದಿಗೆ ಸ್ಪಂದನೆ**

ಮಲೇಬೆನ್ನೂರು, ಜು.25- ಸತತ ಮಳೆಯಿಂದಾಗಿ ಪಟ್ಟಣದಲ್ಲಿ ಹಾಯ್ದು ಹೋಗಿರುವ ಶಿವಮೊಗ್ಗ ಹೆದ್ದಾರಿಯಲ್ಲಿ ಬಿದ್ದಿರುವ ದೊಡ್ಡ - ದೊಡ್ಡ ಗುಂಡಿಗಳನ್ನು ಮುಚ್ಚುವ ಕೆಲಸಕ್ಕೆ ಗುರುವಾರ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಮುಂದಾಗಿದ್ದಾರೆ.

ಕುಂಬಳೂರಿನಿಂದ ಮಲೇಬೆನ್ನೂರಿನ ನೀರಾವರಿ ಇಲಾಖೆ ಕಛೇರಿವರೆಗೆ ಹೆದ್ದಾರಿಯಲ್ಲಿ ಸಾಕಷ್ಟು ಗುಂಡಿಗಳು ಬಿದ್ದಿದ್ದು, ಅಪಘಾತಕ್ಕೆ ಆಹ್ವಾನ ನೀಡುವಂತಿರುವುದರ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ ಎಂಬ ಸುದ್ದಿಯನ್ನು 'ಜನತಾವಾಣಿ' ಗುರುವಾರ ಪ್ರಕಟಿಸಿತ್ತು.

ಈ ಕುರಿತು ತಕ್ಷಣ ಎಚ್ಚೆತ್ತ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ತಾತ್ಕಾಲಿಕವಾಗಿ ದೊಡ್ಡ ಗುಂಡಿಗಳನ್ನು ಮುಚ್ಚುವ ಕೆಲಸ ಆರಂಭಿಸಿರುವುದಕ್ಕೆ ವಾಹನ ಸವಾರರು ಮತ್ತು ಮಲೇಬೆನ್ನೂರು ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್, ಮಾಜಿ ಅಧ್ಯಕ್ಷ ಓ. ಜಿ. ರುದ್ರಗೌಡ, ಪುರಸಭೆ ಸದಸ್ಯ ಎ.ಆರೀಫ್ ಅಲಿ ಹಾಗೂ ಕುಂಬಳೂರಿನ ಎಂ.ವಾಸುದೇವಮೂರ್ತಿ ಅವರು ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

# ನೀಟ್ ರದ್ದುಗೊಳಿಸಿ ಸಿಇಟಿ ಮೂಲಕ ಪ್ರವೇಶಕ್ಕೆ ನಿರ್ಣಯ

**(1ನೇ ಪುಟದಿಂದ)** ಆಧರಿಸಿ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶಾತಿ ನೀಡಬೇಕು.

ನೀಟ್ ಪರೀಕ್ಷೆಗಳಲ್ಲಿ ಆಗುತ್ತಿರುವ ಪುನರಾವರ್ತಿತ ಅಕ್ರಮಗಳನ್ನು ಪರಿಗಣಿಸಿ, ರಾಷ್ಟ್ರೀಯ ಮಟ್ಟದಲ್ಲಿ ಈ ವ್ಯವಸ್ಥೆ ರದ್ದುಪಡಿಸುವ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗ ಅಧಿನಿಯಮ 2019ಕ್ಕೆ ತಿದ್ದುಪಡಿ ಮಾಡುವಂತೆ ನಿರ್ಣಯದ ಮೂಲಕ ಕೇಂದ್ರ ಸರ್ಕಾರವನ್ನು ಸದನಗಳು ಒತ್ತಾಯಿಸಿವೆ.

ನಿರ್ಣಯ ಕೈಗೊಂಡ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್, ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಕೇಂದ್ರೀಕೃತ ಆಡಳಿತ ನಡೆಸುವ ಉದ್ದೇಶದಿಂದ ನೀಟ್ ವ್ಯವಸ್ಥೆ ಜಾರಿಗೆ ತಂದಿದೆ ಎಂದು ದೂರಿದರು.

ಈ ಕಾಯ್ದೆಗೆ ದಕ್ಷಿಣ ಭಾರತದ ಬಹುತೇಕ ರಾಜ್ಯಗಳ ವಿರೋಧವಿದೆ, ಈಗಾಗಲೇ ತಮಿಳುನಾಡು ಸರ್ಕಾರವೂ ಕೂಡ ನಿರ್ಣಯ ಕೈಗೊಂಡು ಕೇಂದ್ರಕ್ಕೆ ಕಳುಹಿಸಿದೆ. ನೀಟ್ ಪರೀಕ್ಷೆ ಪಾರದರ್ಶಕವಾಗಿಲ್ಲ, ಹಲವು ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಿದೆ, ಇಂತಹ ವ್ಯವಸ್ಥೆಯಿಂದ ನಮ್ಮ ವಿದ್ಯಾರ್ಥಿಗಳಿಗೆ ನ್ಯಾಯ ದೊರಕುವುದಿಲ್ಲ.

ಕರ್ನಾಟಕದ ಸಿಇಟಿ ಪರೀಕ್ಷೆ ಇಡೀ ರಾಷ್ಟ್ರಕ್ಕೆ ಮಾದರಿಯಾಗಿದ್ದು, ಇದನ್ನು ಇತರ ರಾಜ್ಯಗಳು ಅನುಕರಣೆ ಮಾಡಿವೆ. ಆದ್ದರಿಂದ ಎನ್‌ಎಂಸಿ ಕಾಯ್ದೆಗೆ ತಿದ್ದುಪಡಿ ತಂದು ಆಯಾ ರಾಜ್ಯಗಳೇ ವೈದ್ಯಕೀಯ ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ನಿರ್ಣಯ ಒತ್ತಾಯಿಸಿದೆ.

# ನಗರದಲ್ಲಿ ನಾಳೆ ಎಸ್ಸಿ, ಎಸ್ಟಿ ಉದ್ಯಮಿದಾರರ ಸಭೆ

ದಾವಣಗೆರೆ,ಜು.25- ಕರ್ನಾಟಕ ದಲಿತ ಉದ್ಯಮಿದಾರರ ಸಂಘದ ದಾವಣಗೆರೆ - ಚಿತ್ರದುರ್ಗ ಜಿಲ್ಲಾ ಶಾಖೆ ವತಿಯಿಂದ ಎಸ್ಸಿ, ಎಸ್ಟಿ ಕೈಗಾರಿಕೋದ್ಯಮಿಗಳ ಸಭೆಯನ್ನು ನಾಡಿದ್ದು ದಿನಾಂಕ 27ರ ಶನಿವಾರ ಬೆಳಿಗ್ಗೆ 10 ಗಂಟೆಗೆ ನಗರದ ರೋಟರಿ ಬಾಲಭವನದಲ್ಲಿ ಕರೆಯಲಾಗಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕೈಗಾರಿಕೋದ್ಯಮಿಗಳಿಗಾಗುತ್ತಿರುವ ಸಮಸ್ಯೆಗಳ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಗುವುದು. ಸಂಘದ ಕಾರ್ಯಾಧ್ಯಕ್ಷ ಸಿ.ಜೆ. ಶ್ರೀನಿವಾಸ್ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ಚನ್ನಕೇಶವ ತಿಳಿಸಿದ್ದಾರೆ.

## ಒಂಬತ್ತನೇ ವರ್ಷದ ಪುಣ್ಯಸ್ಮರಣೆ




**ಪವಾಡಪ್ಪ ದಿ|| ಪಿ.ಎಸ್. ಜಯದೇವಪ್ಪ**

ನೀವು ನಮ್ಮನ್ನಗಲಿ ಇಂದಿಗೆ *(26.7.2024)* ಒಂಬತ್ತು ವರ್ಷಗಳಾದವು.
ನಿಮ್ಮ ನೆನಪು ಸದಾ ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸದಾ ನಿಮ್ಮ ಸ್ಮರಣೆಯಲ್ಲಿರುವ.

ಪತ್ನಿ : **ಶ್ರೀಮತಿ ನಾಗರತ್ನಮ್ಮ,**
ಮಗ-ಸೊಸೆ : **ಶ್ರೀಮತಿ ಶಿಲ್ಪಾ, ಪಿ. ಜೆ. ಗುರುರಾಜ್**
ಮಗ-ಸೊಸೆ : **ಶ್ರೀಮತಿ ಆಶಾ, ಪಿ. ಜೆ. ತಿಪ್ಪೇಸ್ವಾಮಿ**
ಮಗಳು, ಅಳಿಯ : **ಶ್ರೀಮತಿ ಕಾವೇರಿ ಎನ್. ವಸಂತಕುಮಾರ್**
**ಮೊಮ್ಮಕ್ಕಳು : ಯಶ್ ಪವಾಡಪ್ಪ, ಹರ್ಷಿಕ, ತನ್ವಿ ಮತ್ತು ಕುಟುಂಬ ವರ್ಗದವರು.**
**# 900/B61, ಶಕ್ತಿ ನಗರ, 1ನೇ ಮೇನ್, 2ನೇ ಕ್ರಾಸ್ ನಿಟುವಳ್ಳಿ, ದಾವಣಗೆರೆ.**

## ಸಿ.ಎಂ. ಮೋಹನ್ ಕುಮಾರ್ ನಿಧನ



ದಾವಣಗೆರೆ ರಾಜೇಂದ್ರ ಬಡಾವಣೆ ಬನಶಂಕರಿ ದೇವಸ್ಥಾನದ ರಸ್ತೆ, ಡಿ.ಸಿ.ಎಂ. ಹಿಂಭಾಗದ ವಾಸಿ ಸಿ.ಎಂ. ಮೋಹನ್ ಕುಮಾರ್ (P.O.P ಕೆಲಸಗಾರರು) (45) ಇವರು ದಿನಾಂಕ 25.7.2024ರ ಗುರುವಾರ ಮಧ್ಯಾಹ್ನ 3 ಕ್ಕೆ ನಿಧನರಾದರು. ಪತ್ನಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.7.2024ರ ಶುಕ್ರವಾರ ಮಧ್ಯಾಹ್ನ 12 ಕ್ಕೆ ದಾವಣಗೆರೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ನೇತ್ರದಾನ ಮಹಾದಾನ**

# ಪೈಪ್ ಲೈನ್ ಕಾಮಗಾರಿಗೆ ಮನವಿ

**(1ನೇ ಪುಟದಿಂದ)** ನಿಟ್ಟಿನಲ್ಲಿ ಹೊಸದಾಗಿ ಪೈಪ್ ಲೈನ್ ಕಾಮಗಾರಿ ನಡೆಸಿ ರೈತರಿಗೆ ನೆರವಾಗಬೇಕೆಂದರು.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಶಾಸಕ ಬಸವಂತಪ್ಪ ಅವರ ಒತ್ತಾಯಕ್ಕೆ ಜಲಸಂಪನ್ಮೂಲ ಸಚಿವ ಡಿ.ಕೆ.ಶಿಕುಮಾರ್, ಸಂಬಂಧಪಟ್ಟ ಅಧಿಕಾರಿಗಳಿಗೆ ಹೊಸ ಕಾಮಗಾರಿ ನಡೆಸಲು ನೀಲಿ ನಕ್ಷೆ ಮತ್ತು ಯೋಜನಾ ವೆಚ್ಚ ತಯಾರಿಸುವಂತೆ ಸೂಚನೆ ನೀಡಿದರು.

ಈ ಬಾರಿ ಉತ್ತಮ ಮುಂಗಾರು ಆರಂಭದಿಂದ ಭದ್ರಾ ಜಲಾಶಯ ಭರ್ತಿಯಾಗುತ್ತಿದೆ.

ಕೂಡಲೇ ಸಲಹಾ ಸಮಿತಿ ಸಭೆ ಕರೆದು ನೀರು ಬಿಡುಗಡೆಗೆ ದಿನಾಂಕ ನಿಗದಿಗೊಳಿಸಿ ಭದ್ರಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ರೈತರ ಹಿತ ಕಾಪಾಡಬೇಕೆಂದು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರು ಶೀಘ್ರದಲ್ಲೇ ಸಲಹಾ ಸಮಿತಿ ಸಭೆ ಕರೆದು ನೀರು ಬಿಡುಗಡೆಗೆ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

# ಶೀಘ್ರದಲ್ಲೇ ಬಿಜೆಪಿ ಅವಧಿಯ ಅಕ್ರಮ ನಿವೇಶನಗಳ ಪಟ್ಟಿ ಬಿಡುಗಡೆ : ಡಿಕೆಶಿ

**(1ನೇ ಪುಟದಿಂದ)** ಹಾಗೂ ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ ಆಗಿರುವ ಹಗರಣಗಳನ್ನು ಬಯಲಿಗೆ ಎಳೆಯುತ್ತೇವೆ ಎಂದವರು ಹೇಳಿದರು.

# ನನ್ನ ತೇಜೋವಧೆಗೆ ವಿಪಕ್ಷಗಳ ಯತ್ನ: ಸಿಎಂ

ಬೆಂಗಳೂರು, ಜು. 25 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಗರಣ ನಡೆದಿದೆ ಎಂಬ ಆರೋಪ ಗಳನ್ನು ತಳ್ಳಿ ಹಾಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನನ್ನ ತೇಜೋವಧೆಗಾಗಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಪ್ರಯತ್ನ ನಡೆಸಿದೆ ಎಂದು ಆರೋಪಿಸಿದ್ದಾರೆ.

ನನ್ನನ್ನು ವೈಯಕ್ತಿಕವಾಗಿ ಗುರಿಯಾಗಿಟ್ಟುಕೊಂಡು ಉದ್ದೇಶಪೂರ್ವಕವಾಗಿ ಇಲ್ಲದ ವಿಷಯಗಳನ್ನು ಕೆದಕಲಾಗುತ್ತಿದೆ. ಯಾವುದೇ ಅಕ್ರಮಗಳು ನಡೆದಿಲ್ಲ. ಎಲ್ಲವೂ ಕಾನೂನು ರೀತಿ ನಡೆದಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

# ಖಾಲಿ ನಿವೇಶನದಲ್ಲಿನ ಗಿಡ-ಗಂಟಿ ತೆರವಿಗೆ ಹೊನ್ನಾಳಿ ಪುರಸಭೆ ಮುಖ್ಯಾಧಿಕಾರಿ ಸೂಚನೆ

ಹೊನ್ನಾಳಿ,ಜು.25- ಪುರಸಭೆ ವ್ಯಾಪ್ತಿಯ ಖಾಲಿ ನಿವೇಶನದಲ್ಲಿ ಅನಗತ್ಯವಾಗಿ ಬೆಳದಿರುವ ಗಿಡ-ಗಂಟಿಗಳು ಮತ್ತು ಜಾಲಿಗಿಡಗಳನ್ನು ತೆರವುಗೊಳಿಸುವಂತೆ ನಿವೇಶನಗಳ ಮಾಲೀಕರಿಗೆ ಪುರಸಭೆ ಮುಖ್ಯಾಧಿಕಾರಿಗಳು ಸೂಚಿಸಿದ್ದಾರೆ.

ಹೀಗೆ ಖಾಲಿ ಪ್ರದೇಶದಲ್ಲಿ ಬೆಳದಿರುವ ಗಿಡ-ಗಂಟಿಗಳಲ್ಲಿ ಸಾರ್ವಜನಿಕರು ತ್ಯಾಜ್ಯವನ್ನು ಹಾಕುತ್ತಿದ್ದು, ಮಳೆಗಾಲವಾಗಿರುವುದರಿಂದ ನೀರು ನಿಂತು ಡೆಂಗ್ಯೂ, ಮಲೇರಿಯಾ, ಚಿಕನ್‌ಗುನ್ಯಾದಂತಹ ಮಾರಕ ರೋಗಗಳು ಹರಡಲು ಕಾರಣವಾಗುತ್ತದೆ. 7 ದಿನಗಳ ಒಳಗಾಗಿ ನಿವೇಶನ ಮಾಲೀಕರು ಸ್ವಚ್ಛತೆ ಮಾಡಿಸದೇ ಇದ್ದಲ್ಲಿ ಕಛೇರಿಯ ಜೆ.ಸಿ.ಬಿ. ಮೂಲಕ ಸ್ವಚ್ಛಗೊಳಿಸಿ, ಸದರಿ ವೆಚ್ಚವನ್ನು ನಿವೇಶನ ಮಾಲೀಕರಿಂದ ವಸೂಲಾತಿ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಅಲ್ಲದೇ ನಳಗಳಿಗೆ ಟ್ಯಾಪ್‌ನ್ನು ಅಳವಡಿಸಿಕೊಂಡು ನೀರು ಪೋಲಾಗದಂತೆ ನೋಡಿಕೊಳ್ಳಬೇಕು ತಪ್ಪಿದಲ್ಲಿ ಪುರಸಭೆ ಕಾಯ್ದೆಯನ್ವಯ ಕ್ರಮವಹಿಸ ಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

# ತೊಗರಿ ಬೆಳೆ ನಿರ್ವಹಣೆಗೆ ಬೇಸಾಯ ತಜ್ಞರ ಸಲಹೆ



ದಾವಣಗೆರೆ, ಜು.25- ಜಿಲ್ಲೆಯಲ್ಲಿ ತೊಗರಿ ಬೆಳೆಯ ವಿಸ್ತರಣೆ ಮುಂಗಾರಿನಲ್ಲಿ ಹೆಚ್ಚಾಗಿದೆ. ತೊಗರಿ ಅಂತರ ಬೆಳೆಯಾಗಿ ಮೆಕ್ಕೆಜೋಳ, ಅಡಿಕೆ ಹಾಗೂ ಇತರೆ ಬೆಳೆಗಳಲ್ಲಿ ಬೆಳೆಯಲಾಗಿದೆ ಈ ನಿಟ್ಟಿನಲ್ಲಿ ತೊಗರಿಯ ಇಳುವರಿ ಹೆಚ್ಚಿಸಲು ಸೂಕ್ತ ಕ್ರಮ ಕೈಗೊಳ್ಳುವುದು ಅತ್ಯಗತ್ಯ ಎಂದು ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್ ಹೇಳಿದರು. ಬೆಳೆಯು ಬಿತ್ತನೆಯಾಗಿ 50 ದಿನಗಳ ನಂತರ ಬೆಳೆಯ ಮೇಲ್ಭಾಗವನ್ನು ಯಂತ್ರದ ಮೂಲಕ ಚಿವುಟುವುದರಿಂದ ಅರೆ ಕೊಂಬುಗಳು ಹೆಚ್ಚಾಗುತ್ತದೆ ಎಂದರು.

**ಸಮಗ್ರ ಕೀಟ ನಿರ್ವಹಣೆ :** ಗೂಡುಮಾರು ಕೀಟದ ನಿಯಂತ್ರಣಕ್ಕೆ ತತ್ತಿ ನಾಶಕವಾದ ಪ್ರೊಫೆನೋಫಾಸ 2 ಎಂಎಲ್ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಮಾಡಬೇಕು.

ಕಾಯಿ ಕೊರಕದ ನಿಯಂತ್ರಣಕ್ಕಾಗಿ ಪ್ರತಿ ಎಕರೆಗೆ 5ರಂತೆ ಮೋಹಕ ಬಲೆ ಅಳವಡಿಸಬೇಕು. ಕೀಟದ ಬಾಧೆ ಹೆಚ್ಚಾದಾಗ ಬೇವಿನ ಕಷಾಯ 2ಎಂಎಲ್ ಹಾಗೂ ಕೀಟನಾಶಕ ಇಮಾಮ್ಯಾಕ್ಟಿನ್ ಬೆಂಜೋಟ್ 0.4ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪರಣೆ ಮಾಡಬೇಕು ಎಂದು ಮಾಹಿತಿ ನೀಡಿದರು.

ಬೆಳೆಯು ಶೇ.50ರಷ್ಟು ಹೂವಾಡುವ ಹಂತದಲ್ಲಿದ್ದಾಗ ಪಲ್ಸ್ ಮ್ಯಾಜಿಕ್ 7.5 ಗ್ರಾಂ. ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಅದರ ಜೊತೆಗೆ ಸಸ್ಯ ಪ್ರಚೋದಕ 0.4 ಎಂಎಲ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಣೆ ಮಾಡಬೇಕು.

2ನೇ ಸಿಂಪರಣೆಯನ್ನು 15 ದಿನಗಳ ಅಂತರದಲ್ಲಿ ಸಿಂಪರಣೆ ಮಾಡುವುದರಿಂದ ಹೂವು ಉದುರುವುದು ಕಡಿಮೆಯಾಗುವುದರ ಜತೆಗೆ ಕಾಯಿ ಮತ್ತು ಕಾಳುಗಳ ಗಾತ್ರ ಹೆಚ್ಚಾಗಿ ಇಳುವರಿ ಹಾಗೂ ತೂಕ ಹೆಚ್ಚಾಗುತ್ತದೆ ಎಂದು ವಿವರಿಸಿದರು.

# ಮಕ್ಕಳ ಸುರಕ್ಷತೆಯಲ್ಲಿ ಎಲ್ಲರೂ ಒಗ್ಗೂಡಬೇಕು




## ಮಕ್ಕಳ ರಕ್ಷಣಾ ವಿಧಾನಗಳ ಮನವರಿಕೆ ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್

ದಾವಣಗೆರೆ, ಜು. 25- ಡಾನ್ ಬಾಸ್ಕೋ ಸಂಸ್ಥೆ, ದಾವಣಗೆರೆ, ಬ್ರೆಡ್ಸ್ ಸಂಸ್ಥೆ ಬೆಂಗಳೂರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಂಧಿನಗರ ಹಾಗೂ ವಿವಿಧ ಸ್ಥಳೀಯ ಇಲಾಖೆಗಳು, ಸಮುದಾಯ ಸಹಭಾಗಿದಾರರು ಇವರ ಸಂಯುಕ್ತ ಆಶ್ರಯದಲ್ಲಿ ಮಕ್ಕಳ ರಕ್ಷಣಾ ಜಾಲಬಂಧ ಮತ್ತು ಮಕ್ಕಳ ರಕ್ಷಣಾ ವಿಧಾನಗಳ ಮನವರಿಕೆ ಕಾರ್ಯಕ್ರಮವನ್ನು ಗಾಂಧಿನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಮೊನ್ನೆ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಅವರು ಬಾಲಕಾರ್ಮಿಕತೆ, ಪೋಷಕ ರಹಿತ, ಚಿಂದಿ-ಗುಜರಿ ಆರಿಸುವುದು, ಭಿಕ್ಷಾಟನೆ, ಪೋಷಕ ರಹಿತ ಮತ್ತು ಕಾಣೆಯಾದ ಹಾಗೂ ಇನ್ನಿತರೆ ದುಸ್ಥಿತಿಯಲ್ಲಿರುವ ಮಕ್ಕಳ ರಕ್ಷಣೆಗಾಗಿ ಮಕ್ಕಳ ರಕ್ಷಣಾ ಜಾಲಬಂಧ ಯೋಜನೆ ಮಕ್ಕಳ ಹಕ್ಕುಗಳ ರಕ್ಷಣೆಯ ಮಾನವೀಯ ಕಾರ್ಯಕ್ರಮವಾಗಿದೆ ಎಂದು ಶ್ಲಾಘಿಸಿದರು. ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು, ಅವರ ಸರ್ವಾಂಗೀಣ ಅಭಿವೃದ್ಧಿಯ ನಿಟ್ಟಿನಲ್ಲಿ ಇಂತಹ ಯೋಜನೆಗಳು ರಾಜ್ಯಾದ್ಯಂತ ವಿಸ್ತರಿಸಬೇಕಾದ ಅವಶ್ಯಕತೆ ಇದೆ. ಆ ನಿಟ್ಟಿನಲ್ಲಿ ದಾವಣಗೆರೆ ನಗರ ಮಕ್ಕಳ ಸ್ನೇಹಿ ನಗರವಾಗಿ ಹೊರಹೊಮ್ಮಲಿ ಎಂದು ತಿಳಿಸಿದರು.

ಬಡವರು ಮತ್ತು ಶೋಷಿತರ, ಅಬಲರ ಸೇವೆ ಮಾಡುವವರು ಪ್ರಪಂಚದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿರುತ್ತಾರೆ. ಮಾನವ ಸಮಾಜದ ಉನ್ನತಿಗಾಗಿ ದುಡಿದ ಬುದ್ಧ, ಬಸವ, ಅಂಬೇಡ್ಕರ್, ಮಹಾತ್ಮಾ ಗಾಂಧಿ ಹಾಗೂ ಮದರ್ ತೆರೇಸಾ ಅವರು ಇಂದಿನ ಮಕ್ಕಳಿಗೆ ಆದರ್ಶವಾಗಿದ್ದಾರೆ ಎಂದರು. ಶಿಕ್ಷಣ ಮತ್ತು ಆರೋಗ್ಯಗಳ ಒಳಿತಿಗಾಗಿ ಹಾಗೂ ಮಕ್ಕಳ ಸುರಕ್ಷತೆಗಾಗಿ ಎಲ್ಲರೂ ಒಗ್ಗೂಡಿ ಕಾರ್ಯ ಪ್ರವೃತ್ತರಾಗಬೇಕಾಗಿರುವುದು ಇಂದಿನ ಅನಿವಾರ್ಯತೆಯಾಗಿದೆ, ಡಾನ್ ಬಾಸ್ಕೋ ಸಂಸ್ಥೆಯು ಇಂತಹ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ದಾವಣಗೆರೆ ನಗರವನ್ನು 'ಮಕ್ಕಳ ಸ್ನೇಹಿ' ನಗರವನ್ನಾಗಿಸಲು 'ಚೈಲ್ಡ್ ಸೇಫ್ಟಿ ನೆಟ್ (ಮಕ್ಕಳ ಸುರಕ್ಷತಾ ಜಾಲಬಂಧ) ಯೋಜನೆಯೊಂದನ್ನು ಜಾರಿಗೊಳಿಸಿ ಅನುಷ್ಠಾನಗೊಳಿಸುತ್ತಿರುವುದು ಸಮಂಜಸವಾಗಿದೆ ಮತ್ತು ಡಾನ್ ಬಾಸ್ಕೋ ಸಂಸ್ಥೆಯು ಇಂದು ಎಲ್ಲಾ ಮಕ್ಕಳಿಗೆ ನೋಟ್‌ಬುಕ್ಸ್ ಮತ್ತು ಪೆನ್ನುಗಳನ್ನು ವಿತರಣೆ ಮಾಡುವ ಮೂಲಕ ಮಕ್ಕಳಿಗೆ ಶಾಲೆ ಬಿಡದಂತೆ ಹುರಿದುಂಬಿಸುತ್ತಿರುವುದು ಪ್ರಶಂಸನೀಯವೆಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಫಾ. ರೆಜಿ ಜೇಕಬ್ ಅವರು ಮಕ್ಕಳ ರಕ್ಷಣೆ ಮತ್ತು ಸುರಕ್ಷತೆಗಾಗಿ ಜಿಲ್ಲೆಯಾದ್ಯಂತ ಎಲ್ಲರನ್ನೂ ಒಳಗೊಂಡ ಸುರಕ್ಷತಾ ಪರದೆಯನ್ನು ಬಿಗಿಗೊಳಿಸಬೇಕಾಗಿದೆ. ಡೆಂಗ್ಯೂದಿಂದ ರಕ್ಷಣೆ ಪಡೆಯಲು ಹೇಗೆ ಎಲ್ಲರೂ ಸೊಳ್ಳೆ ಪರದೆಯನ್ನು ಬಳಸುತ್ತೇವೋ ಹಾಗೆ ಮಕ್ಕಳ ಸುರಕ್ಷತೆಗೂ ಒಂದು ಸುರಕ್ಷತಾ ಪರದೆಯನ್ನು ಗಟ್ಟಿಗೊಳಿಸೋಣ ಎಂದರು.

ಭಾಷಾ ನಗರ ಆಸ್ಪತ್ರೆಯ ಡಾ. ಶ್ರೀಮತಿ ರೇಖಾ, ಶ್ರೀಮತಿ ಸುಧಾ, ಶ್ರೀಮತಿ ಜಯಮ್ಮ, ಏಡ್ ಸಂಸ್ಥೆಯ ಕಾರ್ಯದರ್ಶಿಗಳಾದ ಡಿ.ಎಸ್. ಬಾಬಣ್ಣ, ಮುಖ್ಯೋಪಾಧ್ಯಾಯರಾದ ಸೋಮಶೇಖರ್, ಆರ್.ಯು. ಮೊದಲಾದವರು ಉಪಸ್ಥಿತರಿದ್ದರು.

ಶ್ರೀಮತಿ ಪಾರ್ವತಮ್ಮ ಪ್ರಾರ್ಥಿಸಿದರು. ಸಿ.ಎಸ್.ಎನ್. ಯೋಜನೆಯ ಸಂಯೋಜಕರಾದ ಚೈಲ್ಡ್ ರೈಟ್ಸ್ ಆಕ್ಟಿವಿಸ್ಟ್ ಬಿ. ಮಂಜಪ್ಪ ನಿರೂಪಣೆ ಮಾಡಿದರು. ಎಂ.ಹೊನ್ನಪ್ಪ ಸ್ವಾಗತಿಸಿದರು. ಹೆಚ್. ನಾಗರಾಜ್ ವಂದಿಸಿದರು.

# ಹರಿಹರದಲ್ಲಿ ಅಕ್ರಮ ಪಡಿತರ ದಾಸ್ತಾನು ವಶ

ಹರಿಹರ,ಜು. 25 - ಅಕ್ರಮವಾಗಿ ಸಂಗ್ರಹ ಮಾಡಿದ್ದ 920 ಕೆ.ಜಿ ಪಡಿತರ ರಾಗಿಯನ್ನು ಆಹಾರ ಇಲಾಖೆಯ ಅಧಿಕಾರಿಗಳು, ತಹಶೀಲ್ದಾರರು ಮತ್ತು ಪೊಲೀಸರು ಗಮನಿಸಿ ಅಕ್ರಮ ದಾಸ್ತಾನು ಎಂದು ಪರಿಗಣಿಸಿ ವಶಕ್ಕೆ ಪಡೆದಿದ್ದಾರೆ.

ಸರ್ಕಾರದಿಂದ ಸಾರ್ವಜನಿಕರಿಗೆ ವಿತರಿಸಬೇಕಾದ ಪಡಿತರ ರಾಗಿಯನ್ನು ಹರಿಹರದ ಸ್ಟಾರ್ ಟ್ರೇಡರ್ಸ್ ಮಾಲೀಕ ಸಯ್ಯದ್ ತಾಜುದ್ದೀನ್, ಹರಿಹರದ ಗೌಸಿಯಾ ಕಾಲೋನಿಯ ಸುರೇಶ್ ಎಂಬುವವರಿಗೆ ಸೇರಿದ ಮನೆಯನ್ನು ಬಾಡಿಗೆ ಪಡೆದು ಅಕ್ರಮವಾಗಿ ದಾಸ್ತಾನು ಸಂಗ್ರಹಿಸಿರುವುದು ಬೆಳಕಿಗೆ ಬಂದಿದೆ.

ಸೈಯ್ಯದ್ ತಾಜುದ್ದೀನ್ ವಿರುದ್ಧ ಆಹಾರ ನಿರೀಕ್ಷಕರು, ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# ಹರಿಹರದಲ್ಲಿ ಹಡಪದ ಅಪ್ಪಣ್ಣ ಜಯಂತಿ



ಹರಿಹರ, ಜು. 25 - ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ದಾರ್ಶನಿಕ ಹಡಪದ ಅಪ್ಪಣ್ಣ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಶಾಸಕ ಬಿ.ಪಿ. ಹರೀಶ್ ಹಡಪದ ಅಪ್ಪಣ್ಣ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ ಹಡಪದ ಅಪ್ಪಣ್ಣ ನವರು ನಾಡಿನ ಒಳಿತಿಗಾಗಿ ಕೊಟ್ಟಂತಹ ಕೊಡುಗೆ ಮತ್ತು ಅವರಲ್ಲಿದ್ದ ಆದರ್ಶ, ತತ್ವಗಳನ್ನು ಹಿಂದಿನ ಯುವಕರು ಮೈಗೂಡಿಸಿಕೊಂಡು ಹೋಗುವಂತೆ ಹೇಳಿದರು.

ಈ ಸಂದರ್ಭದಲ್ಲಿ ಗ್ರೇಡ್2 ತಹಶೀಲ್ದಾರ್ ಶಶಿಧರಯ್ಯ, ಹಡಪದ ಅಪ್ಪಣ್ಣ ಸಮಾಜದ ಮುಖಂಡ ಕೆ. ಉಮಾಪತಿ ನಂದಿಗಾವಿ, ಕೆ.ಎಸ್. ಮಂಜಪ್ಪ, ಹಾಲೇಶ್, ಕೆ. ತಿಪ್ಪೇಸ್ವಾಮಿ, ಕೆ. ಲೋಕೇಶ್ ಜಿಗಳಿ, ಕೆ. ಬೀರಪ್ಪ, ಕೆ. ಶೇಖರಪ್ಪ ಭಾನುವಳ್ಳಿ, ಹನುಮಂತಪ್ಪ ಕೊಕ್ಕನೂರು, ಹರಿಹರ ಶಿವಮೂರ್ತಿ, ಹಾಲೇಶ್ ಹಡಪದ, ಕೆ.ಟಿ. ಕೊಟ್ರೇಶ್ ನಂದಿಗಾವಿ, ಮಹಾಂತೇಶ್, ಮಲ್ಲಪ್ಪ, ಕೆ.ಸಿ. ಸತೀಶಕುಮಾರ್, ಲೋಕೇಶ್ ತಾಲ್ಲೂಕು ಆಡಳಿತದ ಸಂತೋಷ, ಶಿಕ್ಷಣ ಇಲಾಖೆಯ ಬಸವರಾಜಯ್ಯ ಇತರರು ಹಾಜರಿದ್ದರು.

# ರಾಣೇಬೆನ್ನೂರಿನಲ್ಲಿ ಇಂದು ಪತ್ರಿಕಾ ದಿನಾಚರಣೆ

ರಾಣೇಬೆನ್ನೂರು ತಾಲ್ಲೂಕು ಪತ್ರಕರ್ತರ ಸಂಘದಿಂದ ಎಸ್‌ಜೆಎಂವಿ ಮಹಿಳಾ ಮಹಾವಿದ್ಯಾಲಯದ ಸಭಾಭವನದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಪತ್ರಿಕಾ ದಿನಾವನ್ನು ಆಚರಿಸಲಾಗುತ್ತಿದ್ದು,



ಹಿರಿಯ ಪತ್ರಕರ್ತ ಅರುಣಕುಮಾರ ಹಬ್ಬು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಶಾಸಕ ಪ್ರಕಾಶ ಕೋಳಿವಾಡ ಉದ್ಘಾಟಿಸುವರು, ಜಿಲ್ಲಾ ಬಿಜೆಪಿ ಅಧ್ಯಕ್ಷ ಅರುಣಕುಮಾರ ಪೂಜಾರ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ, ಜೆಡಿಎಸ್ ಜಿಲ್ಲಾ ಅಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ, ಜಿಪಂ ಮಾಜಿ ಸದಸ್ಯ ಸಂತೋಷಕುಮಾರ ಪಾಟೀಲ, ಡಿವೈಎಸ್ಪಿ ಡಾ. ಗಿರೀಶ ಬೋಜಣ್ಣನವರ, ಕಾಲೇಜಿನ ಪ್ರಾಚಾರ್ಯ ಡಾ. ಆರ್.ವಿ.ಹೆಗಡಾಳ ಅಥಿತಿಗಳಾಗಿರುವರು. ಸಂಘದ ಅಧ್ಯಕ್ಷ ಎಸ್.ಟಿ.ವೇದಮೂರ್ತಿ ಅಧ್ಯಕ್ಷತೆ ವಹಿಸುವರು.

ಕಾನಿಪ ರಾಜ್ಯ ಕಾರ್ಯದರ್ಶಿ ನಿಂಗಪ್ಪ ಚಾವಡಿ, ಕಾರ್ಯಕಾರಿ ಸಮಿತಿ ಸದಸ್ಯ ಪರಸಪ್ಪ ಸತ್ಯಪ್ಪನವರ, ಜಿಲ್ಲಾ ಅಧ್ಯಕ್ಷ ನಾಗರಾಜ ಕುರವತ್ತೇರ, ಉಪಾಧ್ಯಕ್ಷ ಎಸ್.ಜಿ.ಮಹಾನುಬಾವಿಮಠ, ಕಾರ್ಯದರ್ಶಿ ಸಂತೋಷ ಮಹಾಂತಶೆಟ್ಟರ, ವಿರೇಶ ಮಡ್ಲೂರ, ಎಸ್ ಟಿ ಜೆ ತಾಂತ್ರಿಕ ಮಹಾವಿದ್ಯಾಲಯದ ಪ್ರಾಧ್ಯಾಪಕ ಶಿವಕುಮಾರ ಹೊನ್ನಾಳಿ ಆಗಮಿಸುವರು.

# ಆದಿ ಜಾಂಬವ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್‌ಗೆ ಸನ್ಮಾನ



ದಾವಣಗೆರೆ, ಜು. 25 - ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷ ಜಿ.ಎಸ್. ಮಂಜುನಾಥ್ ಅವರು ಇಂದು ನಗರದ ಸರ್ಕ್ಯೂಟ್ ಹೌಸ್ ಗೆ ಆಗಮಿಸಿದ ಸಂದರ್ಭದಲ್ಲಿ ಅವರನ್ನು ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ಮತ್ತು ಪ್ರಧಾನ ಕಾರ್ಯದರ್ಶಿ ಎಸ್.ಕೆ. ಪಾಂಡುರಾಜ್ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಮಂಜುನಾಥ್ ಅವರನ್ನು ಶಾಲು ಹೊದಿಸಿ, ಸನ್ಮಾನಿಸಿ, ಗೌರವಿಸಲಾಯಿತು. ಸಿ. ದೇವರಾಜ್, ಡಿ. ನಾಗರಾಜ್, ನೀರು ಸರಬರಾಜು ಕೇಂದ್ರದ ತಿಮ್ಮಗೌಡ ಮತ್ತಿತರರು ಉಪಸ್ಥಿತರಿದ್ದರು.

# ಕೊಂಡಜ್ಜಿಯಲ್ಲಿ ಇಂದು ಸುಗಮ ಸಂಗೀತ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಹುಜನ ಸಮಾಜ ಸೇವಾ ಸಂಘ, ಇಂದಿರಾಗಾಂಧಿ ವಸತಿ ಶಾಲೆ (ಕೊಂಡಜ್ಜಿ) ಇವರ ಸಹಯೋಗದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಕೊಂಡಜ್ಜಿಯಲ್ಲಿ ಸಂಸ್ಕೃತಿ-ಸಂಭ್ರಮದ ಅಂಗವಾಗಿ ಹೆಗ್ಗೆರೆ ರಂಗಪ್ಪ ಮತ್ತು ಸಂಗಡಿಗರಿಂದ ಸುಗಮ ಸಂಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ.

ನಾಳೆ ಶನಿವಾರ ಬೆಳಗ್ಗೆ 11 ಗಂಟೆಗೆ ಹರಿಹರ ತಾಲ್ಲೂಕಿನ ದೇವರಬೆಳೆಕೆರೆ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಐರಣಿ ಚಂದ್ರು ಮತ್ತು ತಂಡದವರು ಕಾರ್ಯಕ್ರಮ ನಡೆಸಿಕೊಡುವರು.

# ದೈಹಿಕ ಶಿಕ್ಷಕರಿಗೆ ವೃತ್ತಿ ಗೌರವ ಮುಖ್ಯ

## ಹರಿಹರದ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ



ಹರಿಹರ, ಜು. 25 - ಶಾಲೆಯಲ್ಲಿ ವಿದ್ಯಾರ್ಥಿಗಳು ಶಿಸ್ತುಬದ್ಧವಾಗಿ ಮತ್ತು ಶಾಂತಿಯುತವಾಗಿ ನಡೆದುಕೊಳ್ಳುವುದ್ಕಕೆ ದೈಹಿಕ ಶಿಕ್ಷಣದ ಪಾತ್ರ ಹೆಚ್ಚು ಪ್ರಾಮುಖ್ಯತೆ ಹೊಂದಿರುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಹೇಳಿದರು.

ನಗರದ ಎಂ.ಆರ್.ಬಿ. ಪ್ರೌಢಶಾಲೆಯ ಆವರಣದಲ್ಲಿ ನಡೆದ ಹರಿಹರ ತಾಲ್ಲೂಕು ದೈಹಿಕ ಶಿಕ್ಷಕರ ಮಾಸಿಕ ತರಬೇತಿ ಕಾರ್ಯಾಗಾರ ಹಾಗೂ 2024-25 ನೇ ಸಾಲಿನ ಶೈಕ್ಷಣಿಕ ಮಾರ್ಗದರ್ಶಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ದೈಹಿಕ ಶಿಕ್ಷಕರು ಮಕ್ಕಳಿಗೆ ಪಾಠದ ಜೊತೆಗೆ ಮಾನಸಿಕವಾಗಿ, ಸದೃಢವಾಗಿ ಇರುವುದಕ್ಕೆ ಬೇಕಾದ ರೀತಿಯಲ್ಲಿ ಯೋಗ, ವ್ಯಾಯಾಮ ತರಬೇತಿ ನೀಡಿ ಅವರನ್ನು ತಯಾರಿಸುವ ಕೆಲಸವನ್ನು ಮಾಡುವುದರಿಂದ ಮಕ್ಕಳು ಉತ್ತಮ ಆರೋಗ್ಯವಂತರಾಗುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಚಿತ್ರದುರ್ಗ ಜಿಲ್ಲಾ ಪ್ರಭಾರಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಚಿದಾನಂದಸ್ವಾಮಿ ಇವರು 6 ರಿಂದ 10 ನೇ ತರಗತಿ ವರೆಗಿನ ದೈಹಿಕ ಶಿಕ್ಷಣ ಪಠ್ಯ ವಿಷಯ ಹಾಗೂ ದಾಖಲೆ ನಿರ್ವಹಣೆಯ ಬಗ್ಗೆ ತರಬೇತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಎನ್.ಪಿ.ಮಂಜುಳ ಅವರು, ದೈಹಿಕ ಶಿಕ್ಷನ ಶಿಕ್ಷಕರಿಗೆ ತಮ್ಮ ವೃತ್ತಿಯ ಬಗ್ಗೆ ಅಭಿಮಾನ, ಗೌರವ ಮತ್ತು ಪ್ರೀತಿ ಇರಬೇಕು ಎಂದರು.

ತರಬೇತಿ ಕಾರ್ಯಾಗಾರದಲ್ಲಿ ತಾಲ್ಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಎಸ್. ಪ್ರಭಾಕರ್, ಎನ್‌ಜಿಓ ಜಿಲ್ಲಾ ಉಪಾಧ್ಯಕ್ಷ ಹಾಲಪ್ಪ, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಕರಿಬಸಪ್ಪ ಪ್ಯಾಟಿ ಭಾಗವಹಿಸಿದ್ದರು.

ಶಿವಮ್ಮ ಸ್ವಾಗತಿಸಿದರು. ಹನುಮಂತಪ್ಪ ನಿರೂಪಿಸಿದರು. ಮಲ್ಲಿಕಾರ್ಜುನ್ ವಂದಿಸಿದರು.

# ನಗರದಲ್ಲಿ ಇಂದು ಬಸವ ಬಳಗದಿಂದ ಸಂವಾದ

ಬಸವ ಬಳಗ, ಜಾಗತಿಕ ಲಿಂಗಾಯತ ಮಹಾಸಭಾ, ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ ಹಾಗೂ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಸಂಜೆ 5.30 ಕ್ಕೆ ಸರಸ್ವತಿ ಬಸವ ಬಳಗದ ಆವರಣದಲ್ಲಿ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಸವ ಬಳಗದ ಕಾರ್ಯದರ್ಶಿ ವೀಣಾ ಮಂಜುನಾಥ್ ತಿಳಿಸಿದರು.

ಬಸವ ಬಳಗದ ಅಧ್ಯಕ್ಷ ಹುಚ್ಚಪ್ಪ ಮಾಸ್ತರ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಆಗಮಿಸಲಿದ್ದಾರೆ.

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಶಿವನಕೆರೆ ಬಸವಲಿಂಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಲಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ. ಸಿದ್ಧರಾಮಯ್ಯ 'ಲಿಂಗಾಯತ ಧರ್ಮ ಸಮಕಾಲೀನ ಅವಶ್ಯಕತೆ' ವಿಷಯ ಕುರಿತು ಉಪನ್ಯಾಸ ನೀಡುವ ಮೂಲಕ ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ. 'ಬಸವಣ್ಣ ಸಾಂಸ್ಕೃತಿಕ ನಾಯಕ ಏಕೆ?' ವಿಷಯ ಕುರಿತು ವಿಜಯಪುರದ ಶರಣ ಚಿಂತಕ ಡಾ.ಜೆ.ಎಸ್. ಪಾಟೀಲ್ ಉಪನ್ಯಾಸ ನೀಡಲಿದ್ದಾರೆ.



# ಗುರುಪೂರ್ಣಿಮೆ ನಿರಂತರವಾಗಿರಲಿ

## ಸೋಮೇಶ್ವರ ವಿದ್ಯಾಲಯದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ವಿಜ್ಞಾನ ಶಿಕ್ಷಕಿ ಬಿ.ಆರ್. ಸುಜಾತ ಆಶಯ

ದಾವಣಗೆರೆ, ಜು. 25- ಗುರುಪೂರ್ಣಿಮೆ ಎಂಬುದು ಕೇವಲ ಒಂದು ದಿನಕ್ಕೆ ಸೀಮಿತವಾಗದಿರಲಿ. ಪ್ರತಿ ನಿತ್ಯವೂ ಗುರುಪೂರ್ಣಿಮೆ ಆಗಿರಬೇಕು ಎಂದು ತಾಲ್ಲೂಕಿನ ಅಣಜಿ ಇಂದಿರಾಗಾಂಧಿ ವಸತಿ ಶಾಲೆಯ ವಿಜ್ಞಾನ ಶಿಕ್ಷಕಿ ಬಿ.ಆರ್. ಸುಜಾತ ಹೇಳಿದರು.

ನಗರದ ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಈಚೆಗೆ ನಡೆದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಶ್ರೀ ಗುರು ವ್ಯಾಸರಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಶಿಕ್ಷಕರಾಗಲಿ, ತಂದೆ-ತಾಯಿಗಳಾಗಲಿ, ಹಿರಿಯರಾಗಲಿ ಅವರು ನಮಗೆ ಸಲಹೆ, ಮಾರ್ಗದರ್ಶನ ನೀಡಿ ಜೀವನ ಹಾಗೂ ನಮ್ಮ ಬದುಕನ್ನು ಸಾರ್ಥಕತೆಯತ್ತ ಕೊಂಡೊಯ್ಯುವ ಅವರು ನಮಗೆ ಗುರುಗಳು ಇದ್ದಂತೆ. ಸದಾ ನಾವು ಅವರನ್ನು ಸ್ಮರಿಸುವ ಜೊತೆಗೆ ಗುರುಗಳ ನಡೆ-ನುಡಿ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಇದೇ ವೇಳೆ ಪ್ರಾಥಮಿಕ ಮಕ್ಕಳಿಗೆ ಗುರುಪೂರ್ಣಿಮೆ ಹಿನ್ನೆಲೆ ವೇಷಭೂಷಣ ಸ್ಪರ್ಧೆ ಆಯೋಜಿಸಿದ್ದು, ಪುಟಾಣಿ ಮಕ್ಕಳು ಬಸವಣ್ಣ, ಅಕ್ಕಮಹಾದೇವಿ, ಋಷಿಮುನಿಗಳು, ರಾಘವೇಂದ್ರ ಸ್ವಾಮಿಗಳು, ವಿವೇಕಾನಂದ ಸೇರಿದಂತೆ ಮಹನೀಯರ ವೇಷಭೂಷಣಗಳೊಂದಿಗೆ ಆಗಮಿಸಿ ಗುರು ಶಿಷ್ಯರ ತತ್ವ ಸಿದ್ಧಾಂತ ಸಾರುವ ಮೂಲಕ ಎಲ್ಲರ ಗಮನಸೆಳೆದರು.

ಶಾಲೆಯ ಶೈಕ್ಷಣಿಕ ನಿರ್ದೇಶಕ ಪಿ. ಪರಮೇಶ್ವರಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಪ್ರಾಚಾರ್ಯ ಎನ್. ಪ್ರಭಾವತಿ, ಮುಖ್ಯ ಶಿಕ್ಷಕಿ ಗಾಯತ್ರಿ, ತೀರ್ಪುಗಾರರಾಗಿ ಹೀನಾಬಾಯಿ, ಕವಿತಾ, ರಂಜಿತಾ ಮತ್ತು ಪೋಷಕರು, ವಿದ್ಯಾರ್ಥಿಗಳು ಇದ್ದರು.

# ತೀವ್ರವಾದಿಯ ಬಂಧನ ತುರ್ತು ಪರಿಸ್ಥಿತಿ ಎಂದ ಕಾಂಗ್ರೆಸ್ ನಾಯಕ

ನವದೆಹಲಿ, ಜು. 25 - ತೀವ್ರವಾದಿ ಖಲಿಸ್ತಾನಿ ಪ್ರತಿಪಾದಕ ಅಮೃತ್ ಪಾಲ್ ಸಿಂಗ್ ಬಂಧಿಸಿರುವುದು ತುರ್ತುಪರಿಸ್ಥಿತಿ ಎಂದು ಕಾಂಗ್ರೆಸ್ ನಾಯಕ ಚರಣ್‌ಜಿತ್ ಸಿಂಗ್ ಚನ್ನಿ ಆರೋಪಿಸಿದ್ದಾರೆ. ಲೋಕಸಭೆಯಲ್ಲಿ ಚರ್ಚೆ ನಡೆಯುವಾಗ ಮಾತನಾಡಿದ ಚನ್ನಿ, ಇತ್ತೀಚೆಗೆ ನಡೆದ ಲೋಕ ಸಭಾ ಚುನಾವಣೆಯಲ್ಲಿ ಅಮೃತ್‌ಪಾಲ್ ಸಿಂಗ್ 20 ಲಕ್ಷ ಮತಗಳನ್ನು ಪಡೆದಿದ್ದರು. ಅವರನ್ನು ರಾಷ್ಟ್ರೀಯ ಭದ್ರತಾ ಕಾಯ್ದೆ ಅಡಿ ಬಂಧಿಸಿರು ವುದು ಅಘೋಷಿತ ತುರ್ತುಪರಿಸ್ಥಿತಿ ಎಂದು ಹೇಳಿದರು. ಸಂಸದರಾಗಿ ಆಯ್ಕೆಯಾಗಿರುವ ಸಿಂಗ್ ತಮ್ಮ ಕ್ಷೇತ್ರದ ಬಗ್ಗೆ ಸದನದಲ್ಲಿ ಮಾತನಾಡಲು ಸಾಧ್ಯವಾಗುತ್ತಿಲ್ಲ. ಇದು ತುರ್ತುಪರಿಸ್ಥಿತಿ ಎಂದು ಹೇಳಿದರು.

ಚನ್ನಿ ಹೇಳಿಕೆಯನ್ನು ಸಾಮಾಜಿಕ ಜಾಲತಾಣದಲ್ಲಿ ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ ವಕ್ತಾರ ಶಹಜಾದ್ ಪೂನಾವಾಲಾ, ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಹತ್ಯೆಗೆ ಕಾರಣವಾದ ಖಲಿಸ್ತಾನಿ ವಿಚಾರವನ್ನು ಕಾಂಗ್ರೆಸ್ ಬೆಂಬಲಿಸುತ್ತದೆಯೇ? ಎಂದು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಸಂಸದ ಚನ್ನಿ ಸಂಸತ್ತಿನಲ್ಲಿ ಈ ರೀತಿಯ ಹೇಳಿಕೆ ನೀಡಿರುವುದು ದುರದೃಷ್ಟಕರ. ಕಾಂಗ್ರೆಸ್ ಖಲಿಸ್ತಾನಿಗಳ ಪರವಾಗಿ ಇದೆಯೇ? ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಪ್ರಶ್ನಿಸಿದ್ದಾರೆ. ಈ ನಡುವೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಚನ್ನಿ ಹೇಳಿಕೆಗೂ ಕಾಂಗ್ರೆಸ್ ಪಕ್ಷಕ್ಕೂ ಸಂಬಂಧವಿಲ್ಲ ಎಂದಿದ್ದಾರೆ.


# ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ನಾಗರಿಕರಿಗೆ ತಿಳಿಯಪಡಿಸುವುದೇನೆಂದರೆ, ಶ್ರೀಮತಿ ವೀಣಾ ಎನ್.ಪಿ.. ಕೋಂ ಲೇಟ್ ನಾಗರಾಜ್ ಇವರಿಗೆ, ಶ್ರೀಮತಿ ವಿಜಯ್ ಹೆಚ್, ಕೋಂ ಕೆ.ವಿಶ್ವನಾಥ, ಮತ್ತು ವಿವೇಕ್.ವಿ. ಬಿನ್ ಕೆ.ವಿಶ್ವನಾಥ, ಇವರುಗಳು, ದಿನಾಂಕ: 28-05-2021 ರಲ್ಲಿ ಈ ಪ್ರಕಟಣೆಯ ಆಸ್ತಿಯನ್ನು ತಮ್ಮ ಕುಟುಂಬದ ಕೆಲಸ ಕಾರ್ಯಗಳ ಸಲುವಾಗಿ ತಮಗೆ ಹಣದ ಅವಶ್ಯಕತೆ ಇದ್ದ ಕಾರಣ ತಮ್ಮ ಜೀವನದ ನಿರ್ವಾಹಣೆಗಾಗಿ, ತಾವು ಮಾಡಿದ ಸಾಲವನ್ನು ಬಗೆಹರಿಸಿಕೊಳ್ಳಲು, ಅವರ ಗೃಹ ಕೃತ್ಯದ ಅನಿವಾರ್ಯ ನಿಮಿತ್ತ ಮತ್ತು ನಮ್ಮ ಕಕ್ಷಿದಾರರಾದ ಶ್ರೀಮತಿ ವೀಣಾ ಎನ್.ಪಿ., ಕೋಂ ಲೇಟ್ ನಾಗರಾಜ್ ಇವರಿಗೆ ಸದರಿ ನಿವೇಶನವನ್ನು ಅತಿ ಹೆಚ್ಚಿನ ಬೆಲೆಗೆ ಕ್ರಯಕ್ಕೆ ಕೇಳಿದರ ಮೇರೆಗೆ ಮತ್ತು ಇತರೆ ಅವರ ಖರ್ಚಿಗಾಗಿ ಹಣದ ಅಡಚಣೆಯಿದ್ದ ಕಾರಣ ಅವರು ಈ ಪ್ರಕಟಣೆಯ ಆಸ್ತಿಯನ್ನು ಮಾರಲು ಆಸಕ್ತಿಯನ್ನು ತೋರಿಸಿ ಮತ್ತು ಇಚ್ಛಿಸಿದಾಗ ಈ ಮೇಲೆ ತಿಳಿಸಿದ ನಮ್ಮ ಕಕ್ಷಿದಾರರು ಈ ನೋಟೀಸಿನ ಅನುಸೂಚಿಯಲ್ಲಿ ತೋರಿಸಿರುವ ನಿಮ್ಮ ಆಸ್ತಿಯನ್ನು ಖರೀದಿಸಲು ಆಸಕ್ತಿಯನ್ನು ತೋರಿಸಿ' ಮುಂದಾಗಿ ಬಂದು ದಿನಾಂಕ:28.5.2021 ರಂದು ಕ್ರಯದ ನಿಷ್ಕರ್ಷೆಯನ್ನು ಒಟ್ಟು ರೂ. 72,00,000/- ರೂಪಾಯಿಗಳಿಗೆ (ಎಪ್ಪತ್ತೆರಡು ಲಕ್ಷ ರೂಪಾಯಿ) ಮಾಡಿಕೊಂಡು ಅದೇ ದಿನ ಸಾಕ್ಷಿಗಳ ಸಮಕ್ಷಮ ನಮ್ಮ ಕಕ್ಷಿದಾರರಿಂದ ಮುಂಗಡವಾಗಿ 17,00,000/- (ಹದಿನೇಳು ಲಕ್ಷ) ರೂಪಾಯಿಗಳನ್ನು ಪಡೆದಿರುತ್ತೀರಿ, ಅದರ ವಿವರಣೆ ಈ ರೀತಿ ಇರುತ್ತದೆ. ಅಂದರೆ 5 ಲಕ್ಷ ನಗದು (ನಗದು ಎಂದು ತೋರಿಸಿದೆ. ಆದರೆ ಈ ಮೊತ್ತವನ್ನು ದಾಖಲೆಯ ಉದ್ದೇಶಕ್ಕಾಗಿ ಆರ್.ಟಿ.ಜಿ.ಎಸ್. ನಲ್ಲಿ ದಿನಾಂಕ:15.6.2021 ರಂದು ನಮ್ಮ ಕಕ್ಷಿದಾರರಾದ ಶ್ರೀಮತಿ ವೀಣಾ ಎನ್.ಪಿ., ಕೋಂ ಲೇಟ್ ನಾಗರಾಜ್ ಇವರಿಂದ, ಶ್ರೀಮತಿ ವಿಜಯ ಹೆಚ್, ಕೋಂ:ಕೆ.ವಿಶ್ವನಾಥ, ಮತ್ತು ವಿವೇಕ್.ವಿ. ಬಿನ್: ಕೆ.ವಿಶ್ವನಾಥ, ಇವರುಗಳು ಪಡೆದು ನಂತರ ರೂ. 1 ಲಕ್ಷ ನೆಟ್ (ಫೋನ್ ಪೇ) ಮುಖಾಂತರ ಸಾಕ್ಷಿಗಳ ಸಮಕ್ಷಮ ಪಡೆದುಕೊಂಡು ಹಾಗೂ ರೂ. 11,00,000/- (ಹನ್ನೊಂದು ಲಕ್ಷ) ಮೂಲಕ (ಬರೋಡ ಬ್ಯಾಂಕ್ ದಾವಣಗೆರೆ-ಅಕೌಂಟ್ ನಂ.89320100013091. ಚೆಕ್ ನಂ. 000001, ಚೆಕ್ ದಿನಾಂಕ : 31.05.2021) ಮೂಲಕ ಪಡೆದುಕೊಂಡು, ಸದರಿ ಈ ಕೆಳಗಿನ ಪೂರಾ ಸ್ವತ್ತನ್ನು ಶ್ರೀಮತಿ ವಿಜಯ, ಹೆಚ್. ಕೋಂ ಕೆ.ವಿಶ್ವನಾಥ ಮತ್ತು ವಿವೇಕ್.ವಿ. ಬಿನ್ ಕೆ.ವಿಶ್ವನಾಥ ಇವರುಗಳು, ಆಸ್ತಿಯು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರು ಕ್ರಯ ಮಾಡಿಕೊಟ್ಟಾಗ ಉಳಿದ ಬಾಬ್ತು ಪಡೆದುಕೊಂಡು ಈ ದಿನದಿಂದ ವಾಯಿದೆ ಗೊತ್ತು ಮಾಡದೆ ನಮ್ಮ ಕಕ್ಷಿದಾರರಾದ ಶ್ರೀಮತಿ ವೀಣಾ ಎನ್.ಪಿ., ಕೋಂ ಲೇಟ್ ನಾಗರಾಜ್ ಇವರಿಗೆ, ಸಂಬಂಧಪಟ್ಟ ನೋಂದಣಿ ಕಛೇರಿಯಲ್ಲಿ ನಮ್ಮ ಕಕ್ಷಿದಾರರಾದ ಶ್ರೀಮತಿ ವೀಣಾ ಎನ್.ಪಿ.. ಕೋಂ ಲೇಟ್ ನಾಗರಾಜ್ ಇವರಿಗೆ, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರು ಕ್ರಯ ಮಾಡಿದ ನಂತರ ಹಾಗೂ ಅವರು ಕರೆದಾಗ ಬಂದು ಸದರಿ ಸ್ವತ್ತಿನ ಕ್ರಯ ಪತ್ರ ನೋಂದಾಯಿಸಿ ಕೊಡಲು ಬದ್ಧರಾಗಿರುತ್ತೇವೆ ಎಂದು ನೀವು ಒಪ್ಪಿ ಶ್ರೀಮತಿ ವಿಜಯ ಹೆಚ್. ಕೋಂ ಕೆ. ವಿಶ್ವನಾಥ ಮತ್ತು ವಿವೇಕ್ ವಿ. ಬಿನ್ ಕೆ.ವಿಶ್ವನಾಥ ಇವರುಗಳು ದಿನಾಂಕ 28.5.2021 ರಂದು ಈ ಮೇಲೆ ತಿಳಿಸಿದಂತೆ ಹಣವನ್ನು ಪಡೆದು ಅದೇ ದಿನ ಸರಿಯಾದ ರೂ. 500/- ರ ಮುಖ ಬೆಲೆಯ ಛಾಪ ಕಾಗದವನ್ನು ಶ್ರೀ ವಾಸವಿ ಅಭಿವೃದ್ಧಿ ಸಹಕಾರಿ ಸಂಘ ನಿಯಮಿತ, ದಾವಣಗೆರೆ ಇಲ್ಲಿಂದ ಅವರೇ * ನಮ್ಮ ಕಕ್ಷಿದಾರರಾದ ಶ್ರೀಮತಿ ವೀಣಾ ಎನ್.ಪಿ.. ಕೋಂ ಲೇಟ್ ನಾಗರಾಜ್ ಇವರ ಹೆಸರಿಗೆ ತಂದು ಸಾಕ್ಷಿಗಳ ಸಮಕ್ಷಮ ಸ್ವಾಧೀನ ರಹಿತದ ಶುದ್ಧ ಛಾಪ ಕಾಗದ ದಸ್ತಾವೇಜು ಸಂಖ್ಯೆ:ಐಎನ್-ಕೆಎ16315025284565ಟಿ ದಿನಾಂಕ: 28.5.2021 ರ ಛಾಪಕಾಗದದ ಮೇಲೆ ನೋಂದಾಯಿತವಲ್ಲದ ಕ್ರಯದ ಕರಾರು ಪತ್ರವನ್ನು ಅವರ ಸಂಪೂರ್ಣ ಮುಕ್ತ ಸಮ್ಮತಿಯಿಂದ ಹಾಗೂ ಸಂತೋಷದಿಂದ ಒಪ್ಪಿ ಬರೆದುಕೊಟ್ಟಿರುತ್ತಾರೆ. ಅವರ ಮೇಲೆ ಈಗಾಗಲೇ ನಮ್ಮ ಕಕ್ಷಿದಾರರಾದ ಶ್ರೀಮತಿ ವೀಣಾ ಎನ್.ಪಿ., ಕೋಂ ಲೇಟ್ ನಾಗರಾಜ್ ಇವರು ತಮ್ಮ ವಕೀಲರ ಮೂಲಕ ನೋಟೀಸನ್ನೂ ಸಹ ಜಾರಿಗೊಳಿಸಿದ್ದು ಇರುತ್ತದೆ. ಮುಂದೆ ಇನ್ನೂ ಕೆಲವೇ ದಿನಗಳಲ್ಲಿ ನಮ್ಮ ಕಕ್ಷಿದಾರರಾದ ಶ್ರೀಮತಿ ವೀಣಾ ಎನ್.ಪಿ. ಕೋಂಲೇಟ್ ನಾಗರಾಜ್ ಇವರು, ಶ್ರೀಮತಿ ವಿಜಯ ಹೆಚ್, ಕೋಂ ಕೆ.ವಿಶ್ವನಾಥ ಮತ್ತು ವಿವೇಕ್ ವಿ. ಬಿನ್ ಕೆ.ವಿಶ್ವನಾಥ, ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣ ಹೂಡಲು ಸಿದ್ಧತೆ ನಡೆಸಿರುತ್ತಾರೆ. ಪ್ರಸ್ತುತ ಈಗ ಶ್ರೀಮತಿ ವಿಜಯ್ ಹೆಚ್, ಕೋಂ ಕೆ.ವಿಶ್ವನಾಥ ಮತ್ತು ವಿವೇಕ್.ವಿ. ಬಿನ್: ಕೆ.ವಿಶ್ವನಾಥ ಇವರು ಈ ಕೆಳಗಿನ ಸ್ವತ್ತನ್ನು ಮಾರಲು ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡುವುದು ಬೆಳಕಿಗೆ ಬಂದಿರುತ್ತದೆ. ಈ ಕೆಳಗಿನ ಅನುಸೂಚಿಯ ಸ್ವತ್ತನ್ನು ಅಮಾಯಕರಾದ ಸಾರ್ವಜನಿಕರು ಯಾರು ಖರೀದಿಸಬಾರದೆಂದು ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಸಾರ್ವಜನಿಕರು ಅಥವಾ ಯಾರಾದರು ಮಾರಾಟ ಪ್ರಕ್ರಿಯೆಯಲ್ಲಿ ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳಲ್ಲಿ ತೊಡಗಿದರೆ ಅವರ ವಿರುದ್ಧ ಸೂಕ್ತ ಕಾನೂನಿನ ಕ್ರಮಗಳನ್ನು ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಯತಕ್ಕದ್ದು ಮತ್ತು ಅಂತ ಕ್ರಯಪತ್ರಗಳು ವಿರುದ್ಧ ಸೂಕ್ತ ಕ್ರಮಗಳನ್ನು ಅಥವಾ ಕ್ರಯದ ಕರಾರು ಪತ್ರಗಳು ಅಥವಾ ಯಾವುದೇ ರೀತಿಯ ಪತ್ರಗಳು ಕಾನೂನಡಿ ವಿರೋಧವಾಗಿರುತ್ತವೆ. ಅವುಗಳು ಅಕ್ರಮ ದಾಖಲೆಗಳು ಆಗುತ್ತವೆ ಎಂದು ಈ ಮೂಲಕ ತಿಳಿಯತಕ್ಕದ್ದು. ಅಂತಹ ಪತ್ರಗಳು ನಮ್ಮ ಕಕ್ಷಿದಾರರಾದ ಶ್ರೀಮತಿ ವೀಣಾ ಎನ್.ಪಿ. ಕೋಂ ಲೇಟ್ ನಾಗರಾಜ್ ಇವರಿಗೆ ಬಾಧಕ ಇರುವುದಿಲ್ಲ ಹಾಗೂ ಅವರು ಹೂಡುವ ದಾವೆಗಳಿಗೆ ಸಂಬಂಧ ಇರುವುದಿಲ್ಲ ಮತ್ತು ಬಾಧಕ ಇರುವುದಿಲ್ಲ ಎಂದು ಈ ಮೂಲಕ ಸಮಸ್ತ ಸಾರ್ವಜನಿಕರು ತಿಳಿಯತಕ್ಕದ್ದು.

**ಷೆಡ್ಯೂಲ್ ಸತ್ತಿನ ವಿವರ : ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರವು ರಚಿಸಿರುವಂತಹ, ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಯ, ದಾವಣಗೆರೆಯಲ್ಲಿ ರಚಿಸಲಾದ ನಿವೇಶನ ಸಂಖ್ಯೆ 149 ಇದರ ಅಳತೆ 40x60 ಅಡಿಗಳು ಒಟ್ಟು 2,400 ಚದುರಡಿ ಉಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂಧಿ:**

**ಪೂರ್ವಕ್ಕೆ : ನಿವೇಶನ ಸಂಖ್ಯೆ 148, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 150,**
**ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 138,**

**ಕಕ್ಷಿದಾರರ ಸಹಿ/-**
**(ಶ್ರೀಮತಿ ವೀಣಾ ಎನ್.ಪಿ.)**

**ಸಹಿ/- ಅಜಯ್ ಸಿ. (ಎ.ಸಿ.) ವಕೀಲರು,**
**ದಾವಣಗೆರೆ. ಮೊ. : 9743019896**

# ಹರಿಹರ ಇಂಡಿಯನ್ ಸೌಹಾರ್ದ ಕೋ-ಆಪ್ ಸೊಸೈಟಿ ಅಧ್ಯಕ್ಷರಾಗಿ ಸಿ.ಎನ್. ಹುಲಗೇಶ್



## ಉಪಾಧ್ಯಕ್ಷರಾಗಿ ಕೆ.ಹೆಚ್. ಮಲ್ಲೇಶಪ್ಪ

ಹರಿಹರ, ಜು.25- ಸೊಸೈಟಿಯ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿರುವುದನ್ನು ಗುರುತಿಸಿ ನನಗೆ ಮತ್ತೊಂದು ಅವಧಿಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದರಿಂದ ಸೊಸೈಟಿ ಇನ್ನಷ್ಟು ಪ್ರಗತಿ ಸಾಧಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ದಿ ಇಂಡಿಯನ್ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಸಿ.ಎನ್. ಹುಲಗೇಶ್ ಹೇಳಿದರು.

ನಗರದ ಪಕ್ಕೀರಸ್ವಾಮಿ ಮಠದ ಹತ್ತಿರದಲ್ಲಿರುವ ಸೊಸೈಟಿಗೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಸೊಸೈಟಿ ಉನ್ನತ ಮಟ್ಟದಲ್ಲಿ ಪ್ರಗತಿ ಸಾಧಿಸಲು, ಪ್ರಾರಂಭದಲ್ಲಿ ಸಾಕಷ್ಟು ಸವಾಲುಗಳನ್ನು ಎದುರಿಸಬೇಕಾಯಿತು. ತದನಂತರ ಕೊರೊನಾ ಬಂದು ಸ್ವಲ್ಪ ಮಟ್ಟಿಗೆ ಪ್ರಗತಿಗೆ ಅಡ್ಡ ಆದರೂ ಸಹ, ನಂತರದ ವರ್ಷಗಳಲ್ಲಿ ಸೊಸೈಟಿ ಸರ್ವ ಸದಸ್ಯರ ನಿರೀಕ್ಷೆಗೆ ಮೀರಿ ಲಾಭ ಗಳಿಸಿದೆ ಎಂದರು.

ಸೊಸೈಟಿ ಅಧ್ಯಕ್ಷರಾಗಿ ಸಿ.ಎನ್. ಹುಲಗೇಶ್ ಮತ್ತು ಉಪಾಧ್ಯಕ್ಷರಾಗಿ ಕೆ.ಹೆಚ್. ಮಲ್ಲೇಶಪ್ಪ ಮತ್ತು ನಿರ್ದೇಶಕರಾಗಿ ಜೋಸೆಫ್, ದಿವಾಕರ್, ಸೈಯದ್ ಆಸೀಫ್ ಆಹ್ಮದ್ ಜುನೇದಿ, ಭಕ್ತ ಸಿಂಗ್, ಜಗದೀಶ್ ಚೂರಿ, ಹೆಚ್ ಮಾರುತಿ ಶೆಟ್ಟಿ, ಎಂ.ಬಿ. ಪ್ರಭುದೇವ, ಸುಜಾತ ಕೆ.ಜೆ ಡ್ಯಾನಿಯಲ್, ವನಜಾಕ್ಷಿ ರಾಜೇಂದ್ರಕುಮಾರ್, ರಿಯಾಜ್ ಆಹ್ಮದ್, ಉಮಾಶಂಕರ್ ಎಲ್, ಹೆಚ್.ಎಂ. ಸುಕುಮಾರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಗುಡ್ಡಪ್ಪ ಅವರು ಘೋಷಣೆ ಮಾಡಿದರು. ಲೆಕ್ಕ ಪರಿಶೋಧಕ ಅಧಿಕಾರಿ ಮಂಜುನಾಥ್ ಸ್ವಾಮಿ ಅನುಮೋದಿಸಿದರು.

ಚಿತ್ರದುರ್ಗದ ಎಸ್.ಡಿ.ಓ ಅಧಿಕಾರಿ ಉಮೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಸೊಸೈಟಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಆರ್.ಎಸ್. ರವೀಂದ್ರನಾಥ್, ಎಸ್.ಡಿ.ಎ ಸಂತೋಷ ಕುಮಾರ್, ಪಿಗ್ಮಿ ಸಂಗ್ರಾಹಕರಾದ ಎಸ್.ಎನ್. ಚಂದ್ರಶೇಖರ್, ಎ ಮಂಜುನಾಥ್, ಟಿ.ಎಸ್. ಹನುಮಂತಪ್ಪ, ಎಸ್.ಎನ್. ಸಂದೀಪ್, ಇಮಾನುವೇಲ್ ಮಧುಕರ್, ಆರ್ ಮಲ್ಲೇಶ್, ಪಿ.ಜೆ. ಅನಿಲ್ ಎಸ್. ರವಿಕುಮಾರ್, ಪಿ. ಸತೀಶ್ ಕುಮಾರ್, ಇರ್ಷಾದ್ ಆಲಿ, ಎಸ್ ಅರುಣ್ ಕುಮಾರ್ ಇತರರು ಹಾಜರಿದ್ದರು.

# ಹೊಸ ಡಿಪಿಆರ್ ಸಿದ್ದಪಡಿಸಲು ಸಿಎಂ ಆದೇಶ

**(1ನೇ ಪುಟದಿಂದ)** ಪಡೆಯಿತು. ಹರಿಹರದಲ್ಲಿ ನಡೆದ ಲೋಕಸಭಾ ಚುನಾವಣೆಯ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದ ಸಿಎಂ ಸಿದ್ದರಾಮಯ್ಯ ಅವರಿಗೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು, ಭೈರನಪಾದ ಏತ ನೀರಾವರಿ ಯೋಜನೆ ಜಾರಿಯಿಂದ ಹರಿಹರ ತಾಲ್ಲೂಕಿನ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ಆಗುವ ಅನುಕೂಲದ ಬಗ್ಗೆ ತಿಳಿಸಿದ್ದರು.

ಆಗ ಸಿಎಂ ಸಿದ್ದರಾಮಯ್ಯ ಅವರು, ತಮ್ಮ ಭಾಷಣದಲ್ಲಿ ಚುನಾವಣೆ ನಂತರ ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೊಳಿಸುವುದಾಗಿ ಭರವಸೆ ನೀಡಿದ್ದರು.

ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಭೈರನಪಾದ ಏತ ನೀರಾವರಿ ಯೋಜನೆ ಜಾರಿ ಮಾಡುವಂತೆ ಗುರುವಾರ ಕಾಗಿನೆಲೆ ಶ್ರೀಗಳ ನೇತೃತ್ವದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ನೀಡಿ, ಯೋಜನೆ ಕುರಿತು ಚರ್ಚಿಸಿದಾಗ ಸಿದ್ದರಾಮಯ್ಯ ಅವರು, ತಕ್ಷಣ ಸ್ಪಂದಿಸಿರುವುದು ಸಂತಸ ತಂದಿದೆ ಎಂದು ನಂದಿಗಾವಿ ಶ್ರೀನಿವಾಸ್ ಅವರು, ಈ ವರ್ಷದಲ್ಲೇ ಯೋಜನೆಗೆ ಚಾಲನೆ ಸೀಗುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ರೈತರ ಹರ್ಷ :** ಭೈರನಪಾದ ಏತ ನೀರಾವರಿ ಯೋಜನೆ ಜಾರಿಗಾಗಿ ಹೊಸ ಡಿಪಿಆರ್ ಮಾಡುವಂತೆ ಸಿಎಂ ಸಿದ್ದರಾಮಯ್ಯ ಅವರು ಆದೇಶಿಸಿರುವುದಕ್ಕೆ ಯಲವಟ್ಟಿಯ ಡಿ. ಯೋಮಕೇಶ್ವರಪ್ಪ, ಜಿ.ಆಂಜನೇಯ, ಜಿಗಳಿಯ ಜಿ.ಆನಂದಪ್ಪ, ಹೊಸಳ್ಳಿ ದ್ಯಾವಪ್ಪ ರೆಡ್ಡಿ, ಕೆ.ಎನ್. ಹಳ್ಳಿಯ ಗುಬ್ಬಿ ರಂಗನಾಥ್, ಸಿರಿಗೆರೆಯ ವಕೀಲ ಗಂಗಾಧರ್, ಮಲ್ಲೇಶಪ್ಪ, ನಿವೃತ್ತ ಯೋಧ ಪರಶುರಾಮ್, ದೇವೇಂದ್ರಪ್ಪ, ಭಾನುವಳ್ಳಿಯ ಕನ್ನಪ್ಪ, ಕರಿಯಪ್ಪ, ನಾರಾಯಣಪ್ಪ, ಬಸವರಾಜ್, ರೈತ ಸಂಘದ ಹಾಳೂರು ನಾಗರಾಜ್, ಕೆ.ಎನ್.ಹಳ್ಳಿ ಪ್ರಭುಗೌಡ, ಭಾನುವಳ್ಳಿ ಪ್ರಕಾಶ್, ವಾಸನದ ಬಿ.ಎಸ್. ಮಂಜುನಾಥ್, ಕೊಕ್ಕನೂರು ಸೋಮಶೇಖರ್, ಜಿ.ಪಂ. ಮಾಜಿ ಸದಸ್ಯರಾದ ಬೆಣ್ಣೆಹಳ್ಳಿ ಹಾಲೇಶಪ್ಪ, ಬಿ.ಎಂ.ವಾಗೀಶ್ ಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಡಿಸಿಸಿ ಉಪಾಧ್ಯಕ್ಷ ಹನಗವಾಡಿ ಕುಮಾರ್ ಸೇರಿದಂತೆ ಕೊನೆ ಭಾಗದ ರೈತರು ಹರ್ಷ ವ್ಯಕ್ತಪಡಿಸಿ, ಆದಷ್ಟು ಬೇಗನೇ ಯೋಜನೆಯ ಕಾಮಗಾರಿಗೆ ಚಾಲನೆ ಸಿಗಲಿ ಎಂದು ಒತ್ತಾಯಿಸಿದ್ದಾರೆ.

# ಕಲಾಪ ನುಂಗಿದ ಮುಡಾ

**(1ನೇ ಪುಟದಿಂದ)** ಇದರ ನಡುವೆ ವಿಧಾನಸಭೆಯಲ್ಲಿ ಸಭಾಧ್ಯಕ್ಷರು, ವಿಧಾನ ಪರಿಷತ್‌ನಲ್ಲಿ ಮಸೂದೆಗಳ ಅಂಗೀಕಾರ ಟಿಪ್ಪಣಿ ಪ್ರಕಟಿಸಿ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

## ಹೊರಗುತ್ತಿಗೆ ಮೀಸಲಾತಿ ಮಸೂದೆಗೆ ಚರ್ಚೆಯಿಲ್ಲದೇ ಅಂಗೀಕಾರ

ಬೆಂಗಳೂರು, ಜು. 25 - ಹೊರಗುತ್ತಿಗೆಯಲ್ಲಿ ಮೀಸಲಾತಿ ಕಲ್ಪಿಸುವುದೂ ಸೇರಿದಂತೆ ಆರು ಮಸೂದೆಗಳಿಗೆ ರಾಜ್ಯ ವಿಧಾನಸಭೆಯಲ್ಲಿ ಯಾವುದೇ ಚರ್ಚೆ ಇಲ್ಲದೆ ಅಂಗೀಕಾರ ನೀಡಲಾಗಿದೆ.

ಮೈಸೂರಿನ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲು ಅವಕಾಶ ನೀಡುವಂತೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಶಾಸಕರು ಗದ್ದಲ ನಡೆಸುತ್ತಿರುವ ಮಧ್ಯೆ ಮಸೂದೆಗಳಿಗೆ ಅಂಗೀಕಾರ ಪಡೆಯಲಾಗಿದೆ.

ಸರ್ಕಾರಿ ಇಲಾಖೆ, ನಿಗಮ ಹಾಗೂ ವಿಶ್ವವಿದ್ಯಾನಿಲಯ ಸೇರಿದಂತೆ ಹೊರಗುತ್ತಿಗೆಯಲ್ಲಿ ಪರಿಶಿಷ್ಟರು ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಮಸೂದೆಗೆ ಅಂಗೀಕಾರ ಪಡೆಯಲಾಗಿದೆ. ಮಸೂದೆ ಮಂಡಿಸಿ ಮಾತನಾಡಿದ ಕಾನೂನು ಸಚಿವ ಹೆಚ್.ಕೆ. ಪಾಟೀಲ್, ಹೊರಗುತ್ತಿಗೆಯಲ್ಲಿ ಸಾಮಾಜಿಕ ನ್ಯಾಯ ಕಲ್ಪಿಸಲು ಹಾಗೂ ಎಲ್ಲರಿಗೂ ಸಂವಿಧಾನಿಕ ಹಕ್ಕು ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದಿದ್ದಾರೆ.

# ಪ್ರತಿಭಟನೆ ಸದನದಿಂದ ಬೀದಿಗೆ

**(1ನೇ ಪುಟದಿಂದ)** ಹಳ್ಳಿಗಳು ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸಿ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರಗಳನ್ನು ಜನರ ಮುಂದಿಡುವ ತೀರ್ಮಾನ ಕೈಗೊಂಡಿದ್ದಾರೆ. ಪಾದಯಾತ್ರೆ ಮೈಸೂರು ತಲುಪಿದ ನಂತರ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ ಮುತ್ತಿಗೆ ಕಾರ್ಯ ಹಮ್ಮಿಕೊಳ್ಳುವ ನಿರ್ಧಾರ ಮಾಡಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು, ಉಪನಾಯಕಿ ಶಾರದಾ ಪೂರ್ಯಾನಾಯ್ಕ ಇವರ ಅಧ್ಯಕ್ಷತೆಯಲ್ಲಿ ಉಭಯ ಪಕ್ಷದ ಶಾಸಕರು ಸಭೆ ಸೇರಿ ಮುಡಾ ಹಗರಣವನ್ನು ತಾರಕಕ್ಕೆ ತೆಗೆದುಕೊಂಡು ಹೋಗಲು ನಿರ್ಧರಿಸಿದ್ದಾರೆ.

ಮೈಸೂರಿಗೆ ಪಾದಯಾತ್ರೆ ಎಂದಿನಿಂದ, ಯಾರ ನಾಯಕತ್ವದಲ್ಲಿ ನಡೆಯಬೇಕೆಂಬ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಜೊತೆ ಬರುವ ಭಾನುವಾರ ಸಮಾಲೋಚಿಸಿ, ದಿನಾಂಕ ನಿರ್ಧರಿಸಲಾಗುವುದು.

ಇಂದಿನ ಸಭೆಯಲ್ಲಿ ಜುಲೈ 29 (ಸೋಮವಾರ) ರಿಂದಲೇ ಪಾದಯಾತ್ರೆ ಪ್ರಾರಂಭಿಸಲು ತೀರ್ಮಾನಿಸಲಾಗಿದೆ ಯಾದರೂ ಅಂತಿಮ ನಿರ್ಧಾರ ಭಾನುವಾರ ಹೊರಬೀಳಲಿದೆ. ಬೆಂಗಳೂರು-ಮೈಸೂರು ನಡುವಿನ ಅಂತರವನ್ನು ಆರೇಳು ದಿನದಲ್ಲಿ ಕ್ರಮಿಸುವ ಬಗ್ಗೆ ಚರ್ಚೆಯಾಗಿದೆ, ಈ ಪಾದಯಾತ್ರೆಯಲ್ಲಿ ಯಾವ ಶಾಸಕರು, ಯಾವ ಭಾಗದಲ್ಲಿ ಸೇರ್ಪಡೆಗೊಳ್ಳಬೇಕೆಂಬ ಕುರಿತು ಉಭಯ ಪಕ್ಷಗಳ ನಾಯಕರು ಪಟ್ಟಿ ಸಿದ್ಧಪಡಿಸಲಿದ್ದಾರೆ.

ಪಾದಯಾತ್ರೆಯುದ್ದಕ್ಕೂ ಬರುವ ಪಟ್ಟಣಗಳಲ್ಲಿ ಕಿರುಸಭೆಗಳನ್ನು, ರಾಮನಗರ ಮತ್ತು ಮಂಡ್ಯದಲ್ಲಿ ಬೃಹತ್ ಸಮಾವೇಶ ನಡೆಸುವ ಕುರಿತು ಪ್ರಾಥಮಿಕ ಚರ್ಚೆಯಾಗಿದೆ.

ಸಿದ್ದರಾಮಯ್ಯ ವಿರೋಧ ಪಕ್ಷದಲ್ಲಿದ್ದಾಗ ಗಣಿ ಧಣಿಗಳ ವಿರುದ್ಧ ತೊಡೆ ತಟ್ಟಿ ಬೆಂಗಳೂರಿನಿಂದ ಬಳ್ಳಾರಿಗೆ ಪಾದಯಾತ್ರೆ ನಡೆಸಿದ್ದರು. ಬಿಜೆಪಿ ಆಡಳಿತ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮೇಕೆದಾಟು ಯೋಜನೆಗೆ ಆಗ್ರಹಿಸಿ ಕನಕಪುರದ ಸಂಗಮದಿಂದ ಬೆಂಗಳೂರಿನವರೆಗೆ ಎರಡು ಹಂತಗಳಲ್ಲಿ ಪಾದಯಾತ್ರೆ ಹಮ್ಮಿಕೊಂಡಿದ್ದರು. ಬಳ್ಳಾರಿ ಹಾಗೂ ಮೇಕೆದಾಟು ಪಾದಯಾತ್ರೆ ಕಾಂಗ್ರೆಸ್‌ಗೆ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ತಂದುಕೊಟ್ಟಿತು.

ಸದ್ಯಕ್ಕೆ ಯಾವುದೇ ಸಾರ್ವತ್ರಿಕ ಚುನಾವಣೆ ಇಲ್ಲ, ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭ್ರಷ್ಟಾಚಾರ ಬಯಲಿಗೆಳೆಯಲು ಬಿಜೆಪಿ-ಜೆಡಿಎಸ್ ಪಾದಯಾತ್ರೆ ಹಮ್ಮಿಕೊಂಡಿದೆ.

# ಬಂಗಾರದ ಬೇಡಿಕೆಯಲ್ಲಿ ಶೇ.20ರಷ್ಟು ಹೆಚ್ಚಳ

**(1ನೇ ಪುಟದಿಂದ)** ಹೆಚ್ಚಾಗಿದೆ. ಇತ್ತೀಚಿನ ದಿನಗಳಲ್ಲಿ ಬಂಗಾರದ ಬೆಲೆ 10 ಗ್ರಾಂಗಳಿಗೆ ದಾಖಲೆಯ 74,000 ರೂಪಾಯಿಗಳ ವರೆಗೆ ತಲುಪಿತ್ತು. ಈಗ ಬೆಲೆ ಇಳಿದಿರುವುದು, ಬಂಗಾರ ಪ್ರಿಯರಿಗೆ ಸಂತೋಷ ತಂದಿದೆ.

ಇಳಿಕೆಯ ನಂತರ ಬಂಗಾರದ ಬೇಡಿಕೆ ಶೇ. 20 ರ ವರೆಗೆ ಹೆಚ್ಚಾಗಿದೆ. ಬಂಗಾರದ ಅಡಿಕೆ ಖರೀದಿಸುವ ಸಲುವಾಗಿ ಕುಶಲಕರ್ಮಿಗಳಗಳ ರಜೆಯನ್ನು ಕೆಲ ಸಂಸ್ಥೆಗಳು ರದ್ದುಗೊಳಿಸಿವೆ. ಹಬ್ಬದ ದಿನಗಳು ಬರಲಿರುವ ಕಾರಣ ಬಂಗಾರದ ಬೇಡಿಕೆ ಹೆಚ್ಚಿನ ಮಟ್ಟದಲ್ಲಿ ಮುಂದುವರೆಯುವ ನಿರೀಕ್ಷೆ ಇದೆ.

ಈ ಹಿಂದೆ ಬಂಗಾರದ ಆಮದಿನ ಮೇಲೆ ಶೇ.15ರಷ್ಟು ತೆರಿಗೆ ಇತ್ತು, ಅದನ್ನು ಕೇಂದ್ರ ಶೇ.6ಕ್ಕೆ ಇಳಿಸಿದೆ. ಇದರ ಜೊತೆಗೆ, ಜಾಗತಿಕ ಮಟ್ಟದಲ್ಲಿ ಬಂಗಾರದ ಬೆಲೆ ಹಿಂಜರಿಕೆಯ ಸೂಚನೆ ತೋರುತ್ತಿದೆ. ಈ ವರ್ಷ ಅಮೆರಿಕದ ಕೇಂದ್ರ ಬ್ಯಾಂಕ್ ಬಡ್ಡಿ ದರ ಇಳಿಸುವ ಸಾಧ್ಯತೆ ಇದೆ. ಇದೂ ಸಹ ಬಂಗಾರದ ಬೆಲೆಯ ಮೇಲೆ ಪರಿಣಾಮ ಬೀರುತ್ತಿದೆ.

ಚೀನಾದ ಆರ್ಥಿಕ ಕಳವಳಗಳ ಕಾರಣದಿಂದಾಗಿ ಏಷ್ಯಾ ಮಾರುಕಟ್ಟೆಯಲ್ಲಿ ಬಂಗಾರ ಹಾಗೂ ಬೆಳ್ಳಿ ಬೇಡಿಕೆ ಇಳಿಮುಖವಾಗಿದೆ.

ಇಷ್ಟಾದರೂ ಹಬ್ಬದ ದಿನಗಳಲ್ಲಿ ಬಂಗಾರ ಖರೀದಿ ಹೆಚ್ಚಾಗಲಿದೆ. ದುರ್ಬಲವಾಗುತ್ತಿರುವ ಡಾಲರ್ ಹಾಗೂ ಅಮೆರಿಕದ ಚುನಾವಣೆಯಲ್ಲಿನ ಅನಿಶ್ಚಿತತೆಗಳು ಬಂಗಾರದ ಬೆಲೆಗೆ ಅಲ್ಪಾವಧಿಯಲ್ಲಿ ಚೇತರಿಕೆ ನೀಡಲಿವೆ ಎಂದು ಮೆಹತಾ ಇಕ್ವಿಟೀಸ್ ಸಂಸ್ಥೆಯ ರಾಹುಲ್ ಕಲಂತ್ರಿ ಹೇಳಿದ್ದಾರೆ.

# ಉಪ ವಿಭಾಗಾಧಿಕಾರಿಯಾಗಿ ಸಂತೋಷ್ ಕುಮಾರ್

**(1ನೇ ಪುಟದಿಂದ)** ವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ಎನ್. ದುರ್ಗಾಶ್ರೀ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಸ್ಥಳ ತೋರಿಸಿಲ್ಲ. ರಾಜ್ಯದ ಒಟ್ಟು 21 ಕೆಎಎಸ್ ಅಧಿಕಾರಿಗಳನ್ನು ಸರ್ಕಾರ ವರ್ಗಾವರ್ಗಿ ಮಾಡಿದ್ದು, ಚಿತ್ರದುರ್ಗದ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿಯನ್ನಾಗಿ ಆರ್. ರೂಪ ಅವರನ್ನು ನೇಮಕ ಮಾಡಲಾಗಿದೆ. ಶಿವಮೊಗ್ಗ ಮಹಾನಗರ ಪಾಲಿಕೆಯ ವಲಯ ಆಯುಕ್ತರಾಗಿ ಅಶೋಕ್ ತೇಲಿ ನೇಮಕಗೊಂಡಿದ್ದಾರೆ.

# ಹರಪನಹಳ್ಳಿ ಎಡಿಬಿ ಕಾಲೇಜಿನಲ್ಲಿ ಶ್ರಮದಾನ



ಹರಪನಹಳ್ಳಿ, ಜು.25 - ಪಟ್ಟಣದ ಅಂಬ್ಲಿ ದೊಡ್ಡ ಭರ್ಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯದ ಆವರಣದಲ್ಲಿ ಎನ್.ಎಸ್.ಎಸ್ ವಿದ್ಯಾರ್ಥಿಗಳಿಂದ ಶ್ರಮದಾನ ಕಾರ್ಯ ನಡೆಯಿತು.

ಈ ವೇಳೆ ಪ್ರಾಚಾರ್ಯ ಡಾ. ಎಸ್.ಎಂ. ಸಿದ್ದಲಿಂಗಮೂರ್ತಿ, ಎನ್.ಎಸ್.ಎಸ್ ಅಧಿಕಾರಿಗಳಾದ ಡಾ. ಅಣ್ಣೇಶ್, ಡಾ. ಎ. ಎಂ.ರಾಜಶೇಖರಯ್ಯ, ಪ್ರೊ. ಆನಂದ್, ಪ್ರಾಧ್ಯಾಪಕ ಸುಭಾಷ್, ದೈಹಿಕ ನಿರ್ದೇಶಕರಾದ ಸಿ.ನವಾಜ್ ಭಾಷಾ, ವೀರೇಶ್ ಗಡ್ಡಿ, ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ರೇಣುಕ ಪ್ರಸಾದ ಕಲ್ಮಠ, ವಿದ್ಯಾರ್ಥಿ ಪ್ರತಿನಿಧಿಗಳಾದ ಮಹೇಂದ್ರ, ಚನ್ನವೀರಪ್ಪ, ಶಶಿಕಿರಣ್, ಕುಸುಮ, ಕೊಟ್ರೇಶ್, ಸಾನಿಯಾ, ಪ್ರಿಯಾಂಕ, ನಂದಿನಿ ಸೇರಿದಂತೆ ಎನ್.ಎಸ್.ಎಸ್ ಸ್ವಯಂ ಸೇವಕರು ಭಾಗವಹಿಸಿದ್ದರು.

# ದೃಶ್ಯ ಮಾಧ್ಯಮದ ಮೂಲಕ ತೇಜಸ್ವಿ ಬದುಕು - ಬರಹ ಅನಾವರಣ

ಬೆಂಗಳೂರು, ಜು. 25 - ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಬದುಕು, ಬರಹ ಮತ್ತು ವಿಚಾರಧಾರೆಗಳನ್ನು ದೃಶ್ಯ ಮಾಧ್ಯಮದ ಮೂಲಕ ಅನಾವರಣಗೊಳಿಸಲು ಮಾಧ್ಯಮ ಅನೇಕ ಸಂಸ್ಥೆ ಮುಂದಾಗಿದೆ.

ಸಾಕ್ಷ್ಯ ಚಿತ್ರದಲ್ಲಿ 30ಕ್ಕೂ ಹೆಚ್ಚು ಗಣ್ಯರು, ಕುಟುಂಬ ಸದಸ್ಯರು ಮತ್ತು ಅವರ ಆಪ್ತ ಸ್ನೇಹಿತರು, ತೇಜಸ್ವಿ ಅವರೊಂದಿಗಿನ ತಮ್ಮ ನೆನಪು, ಅನುಭವ ಮತ್ತು ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ.

ಆರು ಕಂತುಗಳನ್ನು ಒಳಗೊಂಡ ಸರಣಿಯ ಪ್ರಾಸ್ತಾವಿಕ ಕಂತು 'ತೇಜಸ್ವಿ ಎಂಬ ವಿಸ್ಮಯ' ಸಾಕ್ಷ್ಯ ಚಿತ್ರದ ಮುನ್ನುಡಿ ಈಗಾಗಲೇ ಬಿಡುಗಡೆಯಾಗಿದೆ.

ಇದೀಗ ಚಿತ್ರದ ಸರಣಿಯನ್ನು ಜುಲೈ 28ರಂದು ಬೆಳಗ್ಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಬಿಡುಗಡೆ ಮಾಡಲಿದ್ದಾರೆ.

ಬಹುಮುಖ ವ್ಯಕ್ತಿತ್ವ ಹೊಂದಿದ್ದ ತೇಜಸ್ವಿ ಅವರು, ಕನ್ನಡ ಸಾಹಿತ್ಯ ಲೋಕದಲ್ಲಿ ಸಮಷ್ಠಿ ಜೀವಿಗಳಲ್ಲಿನ ಸಮಾನತೆಯನ್ನು ಪ್ರತಿಪಾದಿಸುವ ಪರಿಸರ ಕೇಂದ್ರಿತ ಕಥನಗಳನ್ನು ಕಟ್ಟಿದ್ದಷ್ಟೇ ಅಲ್ಲದೆ, ಪರಿಸರ ಪ್ರಿಯರಾಗಿ, ಕೃಷಿ, ಸಾಹಿತಿ, ಪಕ್ಷಿ ಹಾಗೂ ಪ್ರಕೃತಿ ತಜ್ಞ, ಛಾಯಾಗ್ರಾಹಕ, ವಿಜ್ಞಾನಿ, ವಿದ್ವಾಂಸರಾಗಿ ಹಲವು ಬದುಕುಗಳನ್ನು ಶೋಧಿಸಿ, ಸಾಧಿಸಿ, ಇತರರಿಗೂ ಅರಿವಾಗಲೆಂದು ಕೃತಿಗಳಲ್ಲಿ ದಾಖಲಿಸಿದ್ದಾರೆ.

ಇದೇ ಸಂದರ್ಭದಲ್ಲಿ ತೇಜಸ್ವಿ ಅವರ ಸಮಗ್ರ ಕೃತಿ ಜಗತ್ತು 14 ಸಂಪುಟಗಳು ಬಿಡುಗಡೆಗೊಳ್ಳಲಿವೆ.

ಜುಲೈ 28 ಮತ್ತು 29 ರಂದು ಕಲಾಕ್ಷೇತ್ರದಲ್ಲಿ ತೇಜಸ್ವಿ ಸಾಹಿತ್ಯ, ಸಾಂಸ್ಕೃತಿಕ ಹಬ್ಬ, ರಾಷ್ಟ್ರೀಯ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿದೆ.

# ಮುಡಾ ಹಗರಣ : ರಾಜ್ಯಪಾಲರಿಗೆ ಬಿಜೆಪಿ ದೂರು

ಬೆಂಗಳೂರು, ಜು. 25 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಗರಣ ನಡೆದಿದೆ ಎಂದು ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರಿಗೆ ಬಿಜೆಪಿ ಶಾಸಕರು ಮೆರವಣಿಗೆಯಲ್ಲಿ ತೆರಳಿ ಮನವಿ ಸಲ್ಲಿಸಿದ್ದಾರೆ.

ಈ ವಿಷಯದ ಬಗ್ಗೆ ಚರ್ಚಿಸಲು ವಿಧಾನ ಮಂಡಲದ ಉಭಯ ಸದನಗಳಲ್ಲಿ ಸರ್ಕಾರ ಅವಕಾಶ ನೀಡುತ್ತಿಲ್ಲ ಎಂದು ಶಾಸಕರು ದೂರಿದ್ದಾರೆ.

ಹಗರಣದ ಬಗ್ಗೆ ಚರ್ಚೆ ನಡೆಸಲು ಅವಕಾಶ ನೀಡಬೇಕೆಂದು ಪಕ್ಷಗಳ ಶಾಸಕರು ಧರಣಿ ನಡೆಸುತ್ತಿದ್ದ ಮಧ್ಯೆಯೇ ವಿಧಾನ ಮಂಡಲದ ಅಧಿವೇಶನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿತ್ತು. ನಂತರ ಬಿಜೆಪಿ ಶಾಸಕರು ಹಾಗೂ ನಾಯಕರು ರಾಜಭವನಕ್ಕೆ ತೆರಳಿ ಮನವಿ ಸಲ್ಲಿಸಿದ್ದಾರೆ.

# ಕಾನ್ಶಿ ರಾಮ್‌ಗೆ 'ಭಾರತ ರತ್ನ' ನೀಡಲು ಬಿಜೆಪಿ ಸಂಸದನ ಆಗ್ರಹ

ನವದೆಹಲಿ, ಜು. 25 – ಬಿ.ಎಸ್.ಪಿ. ಸ್ಥಾಪಕ ಕಾನ್ಶಿ ರಾಮ್ ಅವರಿಗೆ 'ಭಾರತ ರತ್ನ ಪ್ರಶಸ್ತಿ' ನೀಡಬೇಕು ಎಂದು ಬಿಜೆಪಿ ಸಂಸದ ಅರುಣ್ ಕುಮಾರ್ ಸಾಗರ್ ಲೋಕಸಭೆಯಲ್ಲಿ ಒತ್ತಾಯಿಸಿದ್ದಾರೆ.

ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, ಕಾನ್ಶಿರಾಮ್ ಅವರು ಉನ್ನತ ರಾಜಕಾರಣಿ ಹಾಗೂ ಸಮಾಜ ಸುಧಾರಕ. ಅವರು ಇಡೀ ಜೀವನವನ್ನು ದಮನಿತರ ಕಲ್ಯಾಣಕ್ಕೆ ಮೀಸಲಿಟ್ಟಿದ್ದರು ಎಂದು ಹೇಳಿದರು.

# ಗೋಣಿವಾಡದಲ್ಲಿ ಅರ್ಥಪೂರ್ಣ ಗುರು ಪೂರ್ಣಿಮೆ



ದಾವಣಗೆರೆ, ಜು. 25 - ಗೋಣಿವಾಡದ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯ ಹಾಗೂ ಸರ್.ಎಂ.ವಿ. ಎಲೈಟ್ ಒಲಂಪಿಯಾಡ್ ಶಾಲೆಯಲ್ಲಿ ಅರ್ಥಪೂರ್ಣವಾಗಿ ಗುರು ಪೂರ್ಣಿಮೆ ಆಚರಿಸಲಾಯಿತು. ಪ್ರಾಥಮಿಕ ವಿಭಾಗದ ಮಕ್ಕಳು ಸನಾತನ ಧರ್ಮ ಗುರುಗಳ ವೇಷ ಧರಿಸಿ ಗುರುಗಳ ಮಹತ್ವ ಹಾಗೂ ಶಿಷ್ಯ ಸಮೂಹದ ಸಾಧನೆ ಪ್ರದರ್ಶಿಸಿ ಎಲ್ಲರ ಗಮನ ಸೆಳೆದರು. ಪ್ರೌಢ ಶಾಲೆಯ ವಿದ್ಯಾರ್ಥಿಗಳು ಆದಿಶಂಕರಾಚಾರ್ಯರ ಕಿರು ನಾಟಕದ ಮೂಲಕ ಶಂಕರಾಚಾರ್ಯರ ಮಹತ್ವವನ್ನು ಸಾರಿದರು. ಅಕ್ಷರ ಕಲಿಸಿದ ಗುರುವಿಗೆ ಹೇಗೆ ಗೌರವ ನೀಡಬೇಕೆಂದು ನೃತ್ಯದ ಮೂಲಕ ಎಲ್ಲರ ಗಮನ ಸೆಳೆದರು. ಈ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪಿ.ಎಚ್. ವೀಣಾ ಹಾಗೂ ಶ್ರೀನಿವಾಸ್ ಮತ್ತು ಶಿಕ್ಷಕರಾದ ಸಾವಿತ್ರಮ್ಮ, ಪಲ್ಲವಿ, ಆಡಳಿತ ಸಿಬ್ಬಂದಿ, ಶಿಕ್ಷಕ ವೃಂದ, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮೂರನೇ ದಿನವೂ ಬಂಗಾರ ಬೆಲೆ ಇಳಿಕೆ

**(1ನೇ ಪುಟದಿಂದ)** ಬೆಳ್ಳಿ ಬೆಲೆ ಸಹ ಕೆಜಿಗೆ 3,500 ರೂ. ಇಳಿಕೆಯಾಗಿ 84,000 ರೂಪಾಯಿಗಳಿಗೆ ತಲುಪಿದೆ. ಕಳೆದ ಮೂರು ದಿನಗಳಲ್ಲಿ ಬೆಳ್ಳಿ ಬೆಲೆ 5,000 ರೂ. ಇಳಿಕೆಯಾಗಿದೆ. ಜಾಗತಿಕವಾಗಿ ಬಂಗಾರದ ಬೆಲೆ ಇಳಿಕೆಯಾಗುತ್ತಿರುವುದರಿಂದ ಆಭರಣಕಾರರು ತಮ್ಮ ದಾಸ್ತಾನು ಖಾಲಿ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ಬೆಲೆ ಇಳಿಕೆಯಾಗಿದೆ ಎಂದು ವರ್ತಕರು ಹೇಳಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ ಟೀಂ ಅಕಾಡೆಮಿ ಕಾಲೇಜ್ ಹತ್ತಿರ 30x40 ಪೂರ್ವ, 30x50 ಪೂರ್ವ, 30x40 ಪಶ್ಚಿಮ, 30x60 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ದೊಡ್ಡ ಓಬಜ್ಜಿಹಳ್ಳಿಯಲ್ಲಿ**
ರೋಡಿಗೆ 11 ಗುಂಟೆ ಜಮೀನು ಮಾರಾಟಕ್ಕೆ ಇದೆ. (ಊರಿಗೆ ಲಗತ್ತು) ಸೈಟ್ ಮಾಡಲು ಅನುಕೂಲವಾಗಿದೆ.
98447 42251

**ಮನೆ ಬಾಡಿಗೆಗಿದೆ**
ದೇವರಾಜ್ ಅರಸ್ ಬಡಾವಣೆ, ಎ ಬ್ಲಾಕ್, 3ನೇ ಕ್ರಾಸ್, ಕೋರ್ಟ್ ಹಿಂಭಾಗ, ಸಸ್ಯಹಾರಿಗಳಿಗೆ ಮಾತ್ರ :
74111 56285
81055 57433

**ಶ್ರೀ ದುರ್ಗಾ ಹಾಸ್ಪಿಟಲ್ ಬೇಕಾಗಿದ್ದಾರೆ**
Staff Nurse (Female) GNM/B.Sc, Nursing (Min 2 years of Exp) #1461/6
8ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ಬಾಪೂಜಿ ಬ್ಯಾಂಕ್ ಸಮುದಾಯ ಭವನ ಎದುರು, ಶಾಮನೂರು ಮುಖ್ಯ ರಸ್ತೆ, ದಾವಣಗೆರೆ - 577004
97439 47362

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಸಿಗುತ್ತವೆ**
ಸಂಪರ್ಕಿಸಿ :
77952 48272
97318 46014

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಬೂದಿಹಾಳ್ ಹತ್ತಿರ ಕಮ್ಮತ್ತಹಳ್ಳಿ (ದಾವಣಗೆರೆಯಿಂದ 30 ಕಿ.ಮೀ.)ಯಲ್ಲಿ ಸರ್ವೆ ನಂ. 223/A2, ವಿಸ್ತೀರ್ಣ 4 ಎಕರೆ 9 ಸೆಂಟ್ಸ್ ಜಮೀನು ಮಾರಾಟಕ್ಕಿದೆ.
ನಾಗರಾಜು 82173 29069

**ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಹರಿಹರ**
ಸಿ.ಆರ್.ಮಿಸ್ ನಂ. 324/2024
ಅರ್ಜಿದಾರರು : ಹನುಮಂತಪ್ಪ ತಂದೆ ಲೇಟ್ ರಾಮಪ್ಪ
ವಯಸ್ಸು ಸುಮಾರು 65 ವರ್ಷ, ಕೂಲಿ ಕೆಲಸ, ವಾಸ: 4ನೇ ಮೇನ್, 16ನೇ ಕ್ರಾಸ್, ಮಹಾತ್ಮಗಾಂಧಿ ಕೊಳಚೆ ಪ್ರದೇಶ ಹರಿಹರ, ದಾವಣಗೆರೆ ಜಿಲ್ಲೆ.
- ವಿರುದ್ಧ -
ಎದುರುದಾರರು : ಜನನ ಮತ್ತು ಮರಣ ನೊಂದಾಣಾಧಿಕಾರಿಗಳು, ನಗರಸಭೆ ರವರ ಕಛೇರಿ, ಹರಿಹರ.
**ಸಾರ್ವಜನಿಕ ಪ್ರಕಟಣೆ**
ಅರ್ಜಿದಾರರ ತಾಯಿಯಾದ "ಗಂಗಮ್ಮ ಕೋಂ ಲೇಟ್ ರಾಮಪ್ಪ" ಇವರು ದಿನಾಂಕ: 27–02–2020 ರಂದು ಹರಿಹರ 4ನೇ ಮೇನ್, 16ನೇ ಕ್ರಾಸ್, ಮಹಾತ್ಮಗಾಂಧಿ ಕೊಳಚೆ ಪ್ರದೇಶದ ಅವರ ಮನೆಯಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿ ಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ ದಿನಾಂಕ : 23–08–2024 ರಂದು, ಬೆಳಗ್ಗೆ 11–00 ಗಂಟೆಗೆ ತಾವಾಗಲಿ, ವಕೀಲರ ಮೂಲಕವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು.
ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ: 04-07-2024 ರಂದು ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ ಸಹಿ/– ಶಿರಸ್ತೇದಾರರು, ಸಿವಿಲ್ & ಪ್ರ.ದ.ನ್ಯಾ.ದಂ. ನ್ಯಾಯಾಲಯ, ಹರಿಹರ.
ಸಹಿ/– ಆನಂದ.ಎನ್, ಅರ್ಜಿದಾರರ ಪರ ವಕೀಲರು.

**ಬೇಕಾಗಿದ್ದಾರೆ**
ಪತ್ರಿಕಾ ಕಚೇರಿಯಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ, ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)**
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಹಿಂದು ವೀರಶೈವ ವಧು-ವರರ ಅನ್ವೇಷಣ ಕೇಂದ್ರ**
ಜಾತಿಯ ಯಾವುದೇ ಅಭ್ಯಂತರವಿಲ್ಲ, ಮೊದಲನೇ ಮದುವೆ ಮತ್ತು ಎರಡನೇ ಮದುವೆ ಸಂಪರ್ಕಿಸಿ :
89047 54519, 86184 74929

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಪ್ರಸಿದ್ಧ ವೆಜ್ (veg) ರೆಸ್ಟೋರೆಂಟ್‌ಗೆ ಅನುಭವವಿರುವ kichen supervisor, Store keeper ಬೇಕಾಗಿದ್ದಾರೆ
72596 60786

**ಪಕ್ಕಾ ನಾಟಿ ಕೋಳಿ ದೊರೆಯುತ್ತದೆ**
400 / Kg. ಸಂಪರ್ಕಿಸಿ :
ಮೊ. 83105-91159

**ಫ್ಲಾಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ಮಾರಾಟಕ್ಕಿವೆ.
ಬಿ.ಎಸ್. ಸಂತೋಷ
96322 67555

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರ ಸಭೆ ಡೋ. ನಂ. ಬ್ಯಾಂಕ್ ಸಾಲ ಸೌಲಭ್ಯವಿರುವ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**TUITIONS PCMB/CS**
5th Std to 10th Std
Science, Maths
ಸಮೃದ್ಧಿ ಅಕಾಡೆಮಿ
96202 62361

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಒಂದು ವರ್ಷದ ಹಾಗೂ ಎರಡು ವರ್ಷದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ಅಶೋಕ ನಗರ, ಶಿವಮೊಗ್ಗ (ಜಿ) ಭದ್ರಾವತಿ (ತಾ)
99459 13323, 96864 66760

**FLAT FOR LEASE**
3 BHK, Sqft :1888
AM Apartment,
Nainika Prime Rose,
Vidyanagar Last City
Bus Stop, Davanagere.
89519 38228, 80502 22181

Sri Nidhi Educational Trust (R)
**ನೇರ ಪರೀಕ್ಷೆಗಳು**
SSLC, PUC, BA., B.Com., BCA, MA., M.Com, MSc., Diploma Course, BE., B.Tech, B.Lib, M.Lib, MBA, MCA & All Courses
77609 55550

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ, ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**WE ARE HIRING**
Back office staff
Female -2, Male-1
Good computer knowledge (Excel) and communication skill.
94822 57570, 82172 47472

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ನುರಿತ ಅಡುಗೆ ಭಟ್ಟರು ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ.
96328 03555

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ (ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ) ಹಿಂದಿ ಬಿ.ಎ., ಬಿ.ಇಡಿ. ತರಬೇತಿ ಹೊಂದಿದ ಶಿಕ್ಷಕರು ಬೇಕಾಗಿದ್ದಾರೆ.
99640 17729

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ, ಕೆಲಸಕ್ಕೆ ಹುಡುಗರು ಮತ್ತು ಡ್ರೈವರ್ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC Pass
96860 22969

**CHANGE OF NAME**
I, **Dr. Pranjal Nath** S/o **Pradeep Nath,** Residing at room No. 502, Sunrise Apartment, Jayanagar `B' Block, Davangere, Karnataka-577005. said name mentioned in provisional Degree certificate isssued by Rajiv Gandhi University of Health Sciences. But in certificate of Registration issued by Karnataka Medical Council, my name has been entered as **Dr. Nath Pranjal** Further, I write to state that both the names belong to same person, i.e., myself and are one and the same and to no one else. In Future, I will be using my name as **Dr. Pranjal Nath** sworn to before notary Bangalore.
**Dr. Pranjal Nath**

**ಪ್ರಮಾಣ ಪತ್ರ ಕಳೆದಿದೆ**
ದಾವಣಗೆರೆ ಸಿಟಿ, ಇಮಾಮ್ ನಗರ, 2ನೇ ಮೇನ್, 4ನೇ ಕ್ರಾಸ್‌ನಲ್ಲಿ ವಾಸವಾಗಿರುವ 53 ವರ್ಷದ ಮಹಮ್ಮದ್ ಅಲಿ ಬಿನ್ ಮುರ್ತುಜ ಸಾಬ್ ಜಿ. ನಾನು ಈ ವಿಳಾಸದಲ್ಲಿ ವಾಸವಾಗಿದ್ದು, ದಾವಣಗೆರೆ ತಾ॥ ಹಿರಿಯ ಉಪ ನೊಂದಣಾಧಿಕಾರಿಗಳವರ ಕಛೇರಿ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ಸಿಟಿ, ರಾಜೀವ್‌ಗಾಂಧಿ ಬಡಾವಣೆ ಸೈಟ್ ನಂ. 1008, ಅಳತೆ : 20x30ರ ಸೊತ್ತು ಈ ಹಿಂದೆ ಕರ್ನಾಟಕ ಸರ್ಕಾರ ಆಶ್ರಯ ಯೋಜನೆಯಡಿ ಶಿವಮ್ಮ ಎಂಬುವವರಿಗೆ ಮಂಜೂರಾಗಿದ್ದು, ಸದರಿ ಸೊತ್ತನ್ನು ನಾನು ಸದರಿಯವರಿಂದ ಖರೀದಿಸಿರುತ್ತೇನೆ. ಸದರಿ ಸೊತ್ತಿನ ಹಕ್ಕು ಪತ್ರವು ಜೆರಾಕ್ಸ್ ಮಾಡಿಸುವಾಗ ಕಳೆದು ಹೋಗಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 91481 17859

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಬಸವಾಪಟ್ಟಣ, ಹಾವೇರಿ, ದೊಡ್ಡಘಟ್ಟ ಮತ್ತು ಸೂಳೆಕೆರೆ ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ಐಟಿಐ, ಡಿಪ್ಲೋಮಾ ಮತ್ತು ಡಿಗ್ರಿ ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರುವವರು ತಕ್ಷಣವೇ ಬೇಕಾಗಿದ್ದಾರೆ. ಸಂಪರ್ಕಿಸಿ.
94822 57570 / 86608 12420

**ಕೆಲಸಕ್ಕೆ ಬೇಕಾಗಿದ್ದಾರೆ**
ಲೇಡಿಸ್ ಟೆಲಿ ಮಾರ್ಕೆಟಿಂಗ್ ಸಂಬಳ-9000/- ಬಾಯ್ಸ್‌ಗೆ ಫೀಲ್ಡ್ ವರ್ಕ್ 14000/- ಎಂಸಿಸಿ 'ಬಿ' ಬ್ಲಾಕ್, 5ನೇ ಮೇನ್, 5ನೇ ಕ್ರಾಸ್, ದಾವಣಗೆರೆ.
95917 50723, 78999 51681

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ನಗರ ಸಮೀಪದ ಎಲ್ಲೋ ಬೆಲ್ಟ್ ಜೋನಿನಲ್ಲಿ 9 ಎಕರೆ ಪಾಮಾಯಿಲ್ ತೋಟ, ಬೇಕಾದವರು ಸಂಪರ್ಕಿಸಿ :
99863 61250

**ತಕ್ಷಣವೇ ಆಫೀಸ್ ಬಾಯ್ ಬೇಕಾಗಿದ್ದಾರೆ**
ಗ್ರಾಮೀಣ ಮತ್ತು ನಗರ ವಸತಿ ಊಟ, ಸಂಬಳದೊಂದಿಗೆ ಹಾಗೂ ಡಿಸೈನ್ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಬಿಜೆಪಿ ಆಫೀಸ್‌ನಲ್ಲಿ ಬೇಕಾಗಿದ್ದಾರೆ. ಸಂಪರ್ಕಿಸಿ :
7353507622

**ಫ್ಯಾಕ್ಟರಿ ಬಿಲ್ಡಿಂಗ್ ಬಾಡಿಗೆಗೆ ಇದೆ**
ಪಿ.ಬಿ. ರಸ್ತೆಯ ಸಮೀಪವಿರುವ ಕರೂರ್ ಇಂಡಸ್ಟ್ರೀಯಲ್ ಏರಿಯಾದಲ್ಲಿ 20HP ಪವರ್ ಇರುವ ಬಿಲ್ಡಿಂಗ್, ಆಫೀಸ್ ರೂಮ್ ಕೂಡ ಇದೆ. ನೀರಿನ ಸೌಲಭ್ಯವಿದ್ದು, ವಾಸ್ತು ಪ್ರಕಾರ ಇದೆ. ಆಸಕ್ತರು ಸಂಪರ್ಕಿಸಿ :
98444 94996

# ಕೃಷಿಯಲ್ಲಿ ನೀರಿನ ವೈಜ್ಞಾನಿಕ ಬಳಕೆಗೆ ಸರ್ಕಾರ ಚಿಂತಿಸಲಿ : ಎಎಪಿ

ದಾವಣಗೆರೆ, ಜು. 25- ಕೃಷಿಯಲ್ಲಿ ನೀರನ್ನು ವೈಜ್ಞಾನಿಕವಾಗಿ ಹೇಗೆ ಬಳಸಿಕೊಳ್ಳಬೇಕು ಎಂಬುದರ ಬಗ್ಗೆ ಸರ್ಕಾರ ಚಿಂತನೆ ನಡೆಸಲಿ ಹಾಗೂ ಈ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ಮುಂದಾಗಲಿ ಎಂದು ಆಮ್ ಆದ್ಮಿ ಪಾರ್ಟಿಯ ಜಿಲ್ಲಾಧ್ಯಕ್ಷ ಕೆ.ಎಸ್. ಶಿವಕುಮಾರಪ್ಪ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಟಿ ಮೂಲಕ ಭತ್ತ ಬೆಳೆಯುವುದನ್ನು ತಡೆದು, ಬಿತ್ತನೆ ವಿಧಾನ ಮೂಲಕ ಬೆಳೆಯಲು ರೈತರ ಮನ ಪರಿವರ್ತನೆಗೆ ಸರ್ಕಾರ ಮುಂದಾಗಬೇಕು. ನೀರಿನ ಸಮರ್ಪಕ ನಿರ್ವಹಣೆ ಹೆಸರಲ್ಲಿ ಕಾನೂನು ಜಾರಿಗೆ ತರಬೇಕು. ಆಗ ಶೇ.50ರಷ್ಟು ನೀರು ಉಳಿತಾಯ ಮಾಡಬಹುದು ಎಂದು ಅಭಿಪ್ರಾಯಿಸಿದರು.

ಕರ್ನಾಟಕ ನೀರಾವರಿ ಅಧಿನಿಯಮ-1965ರ ತಿದ್ದುಪಡಿ ಕಾಯ್ದೆಯಿಂದ ರೈತರಿಗೆ ಉಪಯೋಗವಿಲ್ಲ. ಬದಲಾಗಿ ಅಧಿಕಾರಿಗಳಿಗೆ ಭ್ರಷ್ಟಾಚಾರ ನಡೆಸಲು ಉಪಯೋಗವಾಗಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಆದಿಲ್ ಖಾನ್, ಸುರೇಶ್ ಶಿಡ್ಲಾಪುರ, ಧರ್ಮಾನಾಯ್ಕ, ಅಜಿತ್ ಕುಮಾರ್ ಇದ್ದರು.

## ಮಲೇಬೆನ್ನೂರಿನಲ್ಲಿ ಹಸು ಕಳ್ಳನ ಬಂಧನ

ಮಲೇಬೆನ್ನೂರು, ಜು. 25- ಹಸು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಆರೋಪಿಯನ್ನು ಮಲೇಬೆನ್ನೂರು ಪೊಲೀಸರು ಬಂಧಿಸಿದ್ದಾರೆ. ಕಡರನಾಯ್ಕನಹಳ್ಳಿಯ ವಾಸಿ ಅಲಿಸಾಬ್ ಬಂಧಿತ ಆರೋಪಿಯಾಗಿದ್ದು, ಈತನಿಂದ ಕಳ್ಳತನವಾಗಿದ್ದ ಹಸು ಮಾರಾಟದಿಂದ ಬಂದ 15 ಸಾವಿರ ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ 2.10 ಲಕ್ಷ ರೂ. ಮೌಲ್ಯದ ಟಾಟಾ ಏಸ್ ಲಗೇಜ್ ವಾಹನ ಜಪ್ತಿ ಮಾಡಲಾಗಿದೆ.

ಕಡರನಾಯ್ಕನಹಳ್ಳಿಯಲ್ಲಿ 05-04-2023ರ ರಾತ್ರಿ ಗುಡಿಸಲಿನಲ್ಲಿದ್ದ 80 ಸಾವಿರ ರೂ. ಮೌಲ್ಯದ 2 ಹಸು ಕಳ್ಳತನವಾದ ಕುರಿತು ಪ್ರಕರಣ ದಾಖಲಾಗಿತ್ತು. ಹರಿಹರ ವೃತ್ತ ನಿರೀಕ್ಷಕ ಸುರೇಶ ಸಗರಿ, ಮಲೇಬೆನ್ನೂರು ಠಾಣೆಯ ಪಿಎಸ್ಐ (ಕಾ.ಸು) ಪ್ರಭು ಡಿ. ಕೆಳಗಿನಮನಿ, ಸಿಬ್ಬಂದಿಗಳಾದ ಫೈರೋಜ್ ಖಾನ್, ವೆಂಕಟರಮಣ, ಲಕ್ಷ್ಮಣ, ರಾಜಶೇಖರ್, ವೀರೇಶ್, ಜೀಪ್ ಚಾಲಕ ರಾಜಪ್ಪ ಸೇರಿದಂತೆ, ತಂಡವು ಪ್ರಕರಣ ಭೇದಿಸಿದ್ದಾರೆ.

# ನಾಳೆ ಆರೂಢ ದಾಸೋಹಿ ಮಾಗನೂರು ಬಸಪ್ಪ ಪ್ರಶಸ್ತಿ ಪ್ರದಾನ



ದಾವಣಗೆರೆ, ಜು. 25- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ ಸ್ಥಾಪಿತ ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಾಡಿದ್ದು ದಿನಾಂಕ 27ರಂದು ಬೀದರ್‌ನ ಡಾ.ಚನ್ನಬಸವ ಪಟ್ಟದೇವರ ರಂಗ ಮಂದಿರ ಹಾಗೂ ಬರುವ ಆಗಸ್ಟ್ 3ರಂದು ದಾವಣಗೆರೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಹೇಳಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಜು.27ರಂದು ಬೆಳಿಗ್ಗೆ 10.30ಕ್ಕೆ ಬೀದರ್‌ನ ಡಾ.ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 2023ರ ಪ್ರಶಸ್ತಿಯನ್ನು ಬಸವ ಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದೇವರು ಅವರಿಗೆ ನೀಡಲಾಗುವುದು ಎಂದರು.

ನಾಡೋಜ ಡಾ.ಬಸವಲಿಂಗ ಪಟ್ಟದೇವರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಹುಲಸೂರು ಮಠದ ಡಾ.ಶಿವಾನಂದ ಮಹಾಸ್ವಾಮೀಜಿ, ಭಾಲ್ಕಿ ಹಿರೇಮಠ ಸಂಸ್ಥಾನದ ಶ್ರೀ ಗುರುಬಸವ ಪಟ್ಟದೇವರುಗಳು ಕಾರ್ಯಕ್ರಮದ ನೇತೃತ್ವ ವಹಿಸಲಿದ್ದಾರೆ.

ಬೀದರ ಬಸವಗಿರಿ ಬಸವ ಸೇವಾ ಪ್ರತಿಷ್ಠಾನದ ಡಾ.ಗಂಗಾಬಿಕೆ ಅಕ್ಕ ಅವರ ದಿವ್ಯ ಸಮ್ಮುಖದಲ್ಲಿ ಅರಣ್ಯ, ಜೈವಿಕ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ.ಖಂಡ್ರೆ ಸಮಾರಂಭ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಉಪ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಬೀದರ್ ಜಿಲ್ಲಾಧ್ಯಕ್ಷ ಸುರೇಶ ಚೆನ್ನಶೆಟ್ಟಿ ಆಶಯ ನುಡಿಗಳನ್ನು, ಪ್ರಾಚಾರ್ಯ ಡಾ.ಬಸವರಾಜ ಬಲ್ಲೂರು ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಶರಣ ಮಾಗನೂರು ಬಸಪ್ಪನವರ ವ್ಯಕ್ತಿತ್ವ ಕುರಿತು ಮಾತನಾಡಲಿದ್ದಾರೆ ಎಂದರು. ಪ್ರಶಸ್ತಿಯು 50 ಸಾವಿರ ರೂ. ನಗದು ಹಾಗೂ ಫಲಕ ಹೊಂದಿರುತ್ತದೆ ಎಂದರು.

### ಆ.3ರಂದು 2024ರ ಪ್ರಶಸ್ತಿ ಪ್ರದಾನ ಸಮಾರಂಭ



ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ 2024ರ ಪ್ರಶಸ್ತಿ ಪ್ರದಾನ ಸಮಾರಂಭವು ನಗರದ ಕುವೆಂಪು ಕನ್ನಡ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಹೇಳಿದರು.

ಧಾರವಾಡದ ವಚನ ಸಾಹಿತ್ಯ ಸಂಶೋಧಕ ಡಾ.ವೀರಣ್ಣ ಬಿ.ರಾಜೂರ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜವಳಿ ಉದ್ಯಮಿ ಬಿ.ಸಿ. ಉಮಾಪತಿ, ಅತಿಥಿಗಳಾಗಿ ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಆಗಮಿಸಲಿದ್ದಾರೆ. ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದ ಅಧ್ಯಕ್ಷ ಎಂ.ಬಿ. ಸಂಗಮೇಶ್ವರ ಗೌಡ್ರು ಅಧ್ಯಕ್ಷತೆ ವಹಿಸಲಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಸಿ. ಸೋಮಶೇಖರ್ ಅಭಿನಂದನಾ ನುಡಿಗಳನ್ನಾಡಲಿದ್ದು, ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಡಾ.ಹೆಚ್.ವಿ. ವಾಮದೇವಪ್ಪ ಮಾಗನೂರು ಬಸಪ್ಪ ಅವರ ವ್ಯಕ್ತಿತ್ವ ಕುರಿತು ಮಾತನಾಡಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಗನೂರು ಬಸಪ್ಪ ಪ್ರತಿಷ್ಠಾನದ ಆಡಳಿತಾಧಿಕಾರಿ ಎಸ್.ಆರ್. ಶಿರಗುಂಬಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಕೋಶಾಧ್ಯಕ್ಷ ರಾಘವೇಂದ್ರ ನಾಯರಿ, ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಪದಾಧಿಕಾರಿಗಳಾದ ಸತ್ಯಭಾಮ, ಮಂಜುನಾಥ್ ಉಪಸ್ಥಿತರಿದ್ದರು.

## ಶ್ರೀ ಗುರು ವಾದ್ಯ ವೃಂದದಿಂದ ಗಣೇಶ್ ಬಿಸಲೇರಿ ಅವರಿಗೆ ಸನ್ಮಾನ



ಚಿತ್ರದುರ್ಗ, ಜು. 25 - ದಾವಣಗೆರೆಯ ಹಿರಿಯ ರಂಗಭೂಮಿ ಕಲಾವಿದ ಚಿಂದೋಡಿ ಶಂಭುಲಿಂಗಪ್ಪ ಅವರ ಶ್ರೀ ಗುರು ವಾದ್ಯ ವೃಂದದಿಂದ ಚಿತ್ರದುರ್ಗದ ತ.ರಾ.ಸು ರಂಗಮಂದಿರದಲ್ಲಿ ನಿನ್ನೆ ನಡೆದ ನಾಟಕೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ನಗರದ ಬಿ.ಕೆ. ಗಣೇಶ್ ಬಿಸಲೇರಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ, ವಕೀಲರ ಸಂಘದ ಜಿಲ್ಲಾ ಅಧ್ಯಕ್ಷ ವೈ.ತಿಪ್ಪೇಸ್ವಾಮಿ, ವೈ. ಡಿ.ಬದಾಮಿ, ಹಿರಿಯ ರಂಗ ಕಲಾವಿದರು ನಿರ್ದೇಶಕರು, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದಿನೇಶ್ ಗೋಡಿಗೆರೆ, ರಾಜು ಪಾಟೀಲ್ ವಕೀಲರು, ಬಿ. ಶಿವಕುಮಾರ್, ಡಿ. ಓ. ಮುರಾರ್ಜಿ, ಚಿಂದೋಡಿ ಶಂಭುಲಿಂಗಪ್ಪ ಉಪಸ್ಥಿತರಿದ್ದರು.

## ನಗರದಲ್ಲಿ ಶ್ರೀ ಜಯತೀರ್ಥರ ಆರಾಧನೆ



ದಾವಣಗೆರೆ, ಜು. 25 - ಸ್ಥಳೀಯ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಶ್ರೀ ಜಯತೀರ್ಥರ ಆರಾಧನೆ ಮಹೋತ್ಸವವು ಜರುಗಿತು.

ಸ್ಥಳೀಯ ಪಂಡಿತ ಶ್ರೀ ಗೋಪಾಲಾಚಾರ್ಯ ಮಣ್ಣೂರು ಅವರು ಶ್ರೀ ಜಯತೀರ್ಥರ ಮೇರು ಕೃತಿ ಶ್ರೀ ಮನ್ಯಾಯ ಸುಧಾ ಗ್ರಂಥದ ಉಪನ್ಯಾಸ ನೀಡಿದರು. ಭಕ್ತರು ತಮ್ಮ - ತಮ್ಮ ಮನೆಗಳಲ್ಲಿ ಶ್ರೀ ಜಯತೀರ್ಥರ ಗ್ರಂಥವನ್ನು ಇಟ್ಟುಕೊಳ್ಳಬೇಕೆಂದು ಕರೆ ನೀಡಿದರು.

ವಿಶೇಷ ಪೂಜಾ ಕಾರ್ಯವನ್ನು ಮಠದ ಪ್ರಧಾನ ಅರ್ಚಕ ಶ್ರೀ ಕೃಷ್ಣಾಚಾರ್ಯರು ನಡೆಸಿ ಭಕ್ತರಿಗೆ ತೀರ್ಥ ಪ್ರಸಾದ ನೀಡಿದರು.

ಶ್ರೀ ರಾಯರ ಬೃಂದಾವನದ ಮುಂಭಾಗ ಬರುವ ಆಗಸ್ಟ್ 20 ರಿಂದ ನಡೆಯುವ 353ನೇ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ಆರಾಧನೆ ಮಹೋತ್ಸವದ ಆಹ್ವಾನ ಪತ್ರಿಕೆಯನ್ನು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಠದ ವ್ಯವಸ್ಥಾಪಕ ರಾಮಗೋಪಾಲ ಕಟ್ಟಿ, ರಾಜಣ್ಣ, ವೆಂಕಟೇಶ್ ನವರತ್ನ, ಭರಮಸಾಗರದ ಪತ್ರಕರ್ತ ಬಿ.ಜಿ ಅನಂತಪದ್ಮನಾಭ ರಾವ್, ಜನತಾವಾಣಿಯ ಜ್ಯೋತಿಷ್ಯ ತಜ್ಞ ಜಯತೀರ್ಥ ಆಚಾರ್ ಒಡೆಯರ್, ಶಾಮ್ ಕೃಷ್ಣಾಚಾರ್ಯ, ರಾಮಚಂದ್ರರಾವ್ ಇದ್ದರು.

## ನಗರದಲ್ಲಿ ಇಂದು ಪ್ರತಿಭಾ ಪುರಸ್ಕಾರ

ಎಆರ್‌ಜಿ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನಲ್ಲಿ ಇಂದು ಬೆಳಗ್ಗೆ 11ಕ್ಕೆ ಸಾಂಸ್ಕೃತಿಕ ಕ್ರೀಡಾ, ಎನ್‌ಎಸ್‌ಎಸ್, ಎನ್‌ಸಿಸಿ ಚಟುವಟಿಕೆಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ.

ಕರ್ನಾಟಕ ರಾಜ್ಯ ವಿವಿಯ ಕಾಲೇಜು ಅಧ್ಯಾಪಕರ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ.ಎಚ್. ಮುರುಗೇಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಕಲಾವಿದ ಎಸ್.ಜಿ. ಮಲ್ಲೇಶ್ ಕುಮಾರ್, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಎ.ಜಿ. ಮಂಜುನಾಥ್, ಜಿ.ಬಿ.ಬೋರಯ್ಯ, ಜೆ.ಕೆ. ಮಲ್ಲಿಕಾರ್ಜುನ್ ಸೇರಿದಂತೆ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

### ಓದುಗರ ಪತ್ರ

## ಹದಗೆಟ್ಟ ನೈರ್ಮಲ್ಯ : ದುರಸ್ತಿಗೆ ಆಗ್ರಹ



ಮಾನ್ಯರೇ,

ಪಿ.ಬಿ. ರಸ್ತೆಯ ಪೂಜಾ ಹೋಟೆಲ್ ಎದುರು, ಸೊಸೈಟಿ ಪೆಟ್ರೋಲ್ ಬಂಕ್ ಪಕ್ಕದಲ್ಲಿ ಇರುವ ಮಳಿಗೆಗಳ ಮುಂಭಾಗದ ಪಾರ್ಕಿಂಗ್‌ನಲ್ಲಿ ಮಳೆ ನೀರು ಹರಿಯದೇ ಕೆಸರು ಗದ್ದೆಯಂತಾಗಿದೆ. ಸುತ್ತಲೂ ಪಾಚಿಗಟ್ಟಿ, ಸೊಳ್ಳೆಕಾಟ ಹೆಚ್ಚಾಗಿದ್ದು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೈರ್ಮಲ್ಯ ಹದಗೆಟ್ಟಿದೆ.ಸಂಬಂಧಪಟ್ಟ ಕಾರ್ಪೋರೇಷನ್ ಸದಸ್ಯರು ಅಥವಾ ಆಯುಕ್ತರು, ಸ್ಮಾರ್ಟ್ ಸಿಟಿ ಅಧಿಕಾರಿಗಳು ಗಮನ ಹರಿಸಬೇಕಾಗಿ ಮನವಿ.

- ಟಿ.ಜಿ. ಸುರೇಶ್, ದಾವಣಗೆರೆ.

# ನಗರದಲ್ಲಿ ನಾಳೆ ಸಂಗೀತ, ನೃತ್ಯ, ತಾಳವಾದ್ಯದ ಲಿಖಿತ ಪರೀಕ್ಷೆ

ದಾವಣಗೆರೆ, ಜು. 25 - ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 2024ನೇ ಸಾಲಿನ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಲಿಖಿತ ಪರೀಕ್ಷೆಗಳು ನಾಡಿದ್ದು ದಿನಾಂಕ 27 ಮತ್ತು 28ರಂದು ನಡೆಯಲಿವೆ ಎಂದು ಮಹತೀ ಸಂಗೀತ ಮಹಾ ವಿದ್ಯಾಲಯದ ಎಂ.ದ್ವಾರಕೀಶ್ ತಿಳಿಸಿದರು.

ದಾವಣಗೆರೆ, ಚಿತ್ರದುರ್ಗ ಮತ್ತು ಹಾವೇರಿ ಈ ಮೂರು ಜಿಲ್ಲೆಯ ಸಂಗೀತ ವಿದ್ಯಾರ್ಥಿಗಳ ಪರೀಕ್ಷಾ ಕೇಂದ್ರವು ನಗರದ ಮಾಗನೂರು ಬಸಪ್ಪ ಪಬ್ಲಿಕ್ ಶಾಲೆಯಾಗಿದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಡಿದ್ದು ದಿನಾಂಕ 27ರ ಶನಿವಾರ ಮಧ್ಯಾಹ್ನ 1ರಿಂದ 3.30ರ ಅವಧಿಯಲ್ಲಿ ಜ್ಯೂನಿಯರ್ ವಿಭಾಗದ ಶಾಸ್ತ್ರ ಪತ್ರಿಕೆ ಪರೀಕ್ಷೆ ಹಾಗೂ ಮಧ್ಯಾಹ್ನ 4ರಿಂದ 4.30ರ ವರೆಗೆ ಜ್ಯೂನಿಯರ್ ವಿಭಾಗದ ಶ್ರವಣ ಜ್ಞಾನ ಹಾಗೂ ದೃಶ್ಯಜ್ಞಾನ ಲಿಖಿತ ಪರೀಕ್ಷೆ ನಡೆಯಲಿದೆ.

ದಿನಾಂಕ 28ರ ಬೆಳಗ್ಗೆ 10ರಿಂದ 12.30ರ ಅವಧಿಯಲ್ಲಿ ಶಾಸ್ತ್ರ ಪತ್ರಿಕೆ-1ರ ಸೀನಿಯರ್ ವಿದ್ವತ್ ಪೂರ್ವ, ವಿದ್ವತ್ ಅಂತಿಮ ಹಾಗೂ ಮಧ್ಯಾಹ್ನ 1.30 ರಿಂದ 4ರ ವರೆಗೆ ಶಾಸ್ತ್ರ ಪತ್ರಿಕೆ-2ರ ಸೀನಿಯರ್ ವಿದ್ವತ್ ಪೂರ್ವ, ವಿದ್ವತ್ ಅಂತಿಮ ಪರೀಕ್ಷೆ ನಡೆಯಲಿದೆ ಎಂದು ವಿವರಿಸಿದರು.

ಆಗಸ್ಟ್ 3, 4, 10 ಮತ್ತು 11ರಂದು ಸಂಗೀತ ಮತ್ತು ನೃತ್ಯ ಪರೀಕ್ಷೆಗಳ ಜ್ಯೂನಿಯರ್ ಮತ್ತು ಸೀನಿಯರ್ ಹಂತಗಳ ಪ್ರಾಯೋಗಿಕ ಪರೀಕ್ಷೆ ನಡೆಸಲಿದ್ದೇವೆ ಎಂದು ಮಾಹಿತಿ ನೀಡಿದರು. ಸಂಗೀತ ಮತ್ತು ನೃತ್ಯ ಪರೀಕ್ಷೆಯನ್ನು ಮೂರು ಜಿಲ್ಲೆಗಳಿಂದ 496 ವಿದ್ಯಾರ್ಥಿಗಳು ತೆಗೆದುಕೊಂಡಿದ್ದು, ಅದರಲ್ಲಿ 296 ಜ್ಯೂನಿಯರ್ ವಿದ್ಯಾರ್ಥಿಗಳಿದ್ದಾರೆ.

ಸಂಗೀತ ಪರೀಕ್ಷೆಗಳಿಗೆ ಸಂಬಂಧಿಸಿದ ಮಾಹಿತಿಗಾಗಿ 9448872944, 9986044145 ಹಾಗೂ 9901715102 ಗೆ ಸಂಪರ್ಕಿಸಲು ತಿಳಿಸಿದ್ದಾರೆ.

ಸಂಸ್ಥೆಯ ನಿರ್ದೇಶಕ ಶ್ರೀಧರ್, ನಿರ್ದೇಶಕಿ ಸವಿತಾ ಕೂಲಂಬಿ, ಕಾಂಚನಾ ಸತೀಶ್, ಡಾ. ಮಂಗಳಾ ಶೇಖರ್, ಬೃಂದಾ, ರಾಜಶೇಖರ್ ಬೆನ್ನೂರು ಸುದ್ದಿಗೋಷ್ಠಿಯಲ್ಲಿದ್ದರು.

## ಸೀತಮ್ಮ ಕಾಲೇಜಿನಲ್ಲಿ ಇಂದು ಉಪನ್ಯಾಸ

ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿ ಪೂರ್ವಕ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಜೆ.ಹೆಚ್. ಪಟೇಲ್ ಫೌಂಡೇಷನ್, ಕರುಣಾ ಜೀವ ಕಲ್ಯಾಣ ಟ್ರಸ್ಟ್ ಇವರುಗಳ ಸಂಯುಕ್ತಾಶ್ರಯದಲ್ಲಿ ರಾಜನಹಳ್ಳಿ ಸೀತಮ್ಮ ಬಾಲಕಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಇಂದು ಬೆಳಿಗ್ಗೆ 11 ಕ್ಕೆ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಶ್ರೀಮತಿ ಅಕ್ಕೈ ಪದ್ಮಸಾಲಿ ಅವರು ಲೈಂಗಿಕ ಅಲ್ಪಸಂಖ್ಯಾತರ ಸಮಸ್ಯೆಗಳು ಮತ್ತು ಸವಾಲುಗಳು ವಿಷಯವಾಗಿ ಉಪನ್ಯಾಸ ನೀಡಲಿದ್ದಾರೆ. ಸೀತಮ್ಮ ಕಾಲೇಜಿನ ಪ್ರಾಚಾರ್ಯ ಟಿ.ಎ. ಕುಸಗಟ್ಟಿ ಅಧ್ಯಕ್ಷತೆ ವಹಿಸುವರು. ಪ್ರೊ. ಪದ್ಮ ಟಿ. ಚಿನ್ಮಯಿ ಉಪಸ್ಥಿತರಿರುವರು.

## ಅನ್‌ಮೋಲ್‌ನಲ್ಲಿ ಇಂದು ಉಪನ್ಯಾಸ

ಕರ್ನಾಟಕ ಸಾಹಿತ್ಯ ಅಕಾಡೆಮಿ, ಜೆ.ಹೆಚ್. ಪಟೇಲ್ ಫೌಂಡೇಷನ್, ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಶಿರಮಗೊಂಡನ ಹಳ್ಳಿಯ ಅನ್‌ಮೋಲ್ ಪಬ್ಲಿಕ್ ಸ್ಕೂಲ್ ಅಂಡ್ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಏರ್ಪಡಿಸಲಾಗಿದೆ. ಹಿರಿಯ ಸಾಹಿತಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ ಅವರು ಕನ್ನಡ ಸಾಹಿತ್ಯ ಲೋಕ ದೃಷ್ಟಿ ವಿಷಯವಾಗಿ ಉಪನ್ಯಾಸ ನೀಡಲಿದ್ದಾರೆ.

ನಿವೃತ್ತ ಕೆ.ಎ.ಎಸ್. ಅಧಿಕಾರಿ ರುದ್ರಪ್ಪ ಹನಗವಾಡಿ, ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಶಿವನಕರೆ ಬಸವಲಿಂಗಪ್ಪ ಉಪಸ್ಥಿತರಿರುವರು.

## ಸಿದ್ಧಗಂಗಾ ಶಾಲೆಯಲ್ಲಿ ಇಂದು ಉಪನ್ಯಾಸ

ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಜೆ.ಹೆಚ್. ಪಟೇಲ್ ಫೌಂಡೇಷನ್, ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸ ಲಾಗಿದೆ. ಚಾಮರಾಜನಗರ ದೀನಬಂಧು ಟ್ರಸ್ಟ್‌ನ ಜಿ.ಎಸ್. ಜಯದೇವ ಕಾರ್ಯಕ್ರಮ ಉದ್ಘಾಟಿಸಿ, ಶಿಕ್ಷಣ ಮತ್ತು ಮಕ್ಕಳ ಮನೋ ವಿಕಾಸ ವಿಷಯವಾಗಿ ಉಪನ್ಯಾಸ ನೀಡಲಿದ್ದಾರೆ. ವಿಜಯ ಪುರ ಶರಣತತ್ವ ಚಿಂತಕ ಡಾ. ಜೆ.ಎಸ್. ಪಾಟೀಲ ಬಸವವಾದ ಮತ್ತು ಸಂವಿಧಾನದ ಆಶಯಗಳು ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಸಿದ್ಧಗಂಗಾ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಜಸ್ಟಿನ್ ಡಿಸೋಜ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

## ಹರಿಹರ : 29 ರಂದು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಆಡಿ ಕೃತಿಕ ಪೂಜೆ



ಹರಿಹರ, ಜು.25- ನಗರದ ಹೊಸಭರಂಪುರ ಬಡಾವಣೆಯ ನೂರ ಎಂಟು ಲಿಂಗೇಶ್ವರ ದೇವಸ್ಥಾನ ಹಿಂಬದಿಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಇದೇ ದಿನಾಂಕ 29 ರ ಸೋಮವಾರ ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ಆಡಿ ಕೃತ್ತಿಕ ಪೂಜೆ ನಡೆಯಲಿದೆ.

ಅಂದು ಬೆಳಗ್ಗೆ 8.30 ಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ಪುಣ್ಯಾಹ ಮಹಾ ಸಂಕಲ್ಪ, 9 ಗಂಟೆಗೆ ಮಹಾ ಮಸ್ತಕಾಭಿಷೇಕ, 12 ಗಂಟೆಗೆ ದೀಪಾರಾಧನೆ ಮಹಾಮಂಗಳಾರತಿ, 12.30 ಕ್ಕೆ ಮಹಾ ಪ್ರಸಾದ ವಿನಿಯೋಗ, ಸಂಜೆ 7.30 ಕ್ಕೆ ದೀಪ ನಮಸ್ಕಾರ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ನಡೆಯುತ್ತವೆ ಎಂದು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಸಮಿತಿಯ ಟಿ.ರಾಜೇಂದ್ರನ್, ಎ.ಶೇಖರ್, ಜಿ. ಸುಬ್ರಹ್ಮಣ್ಯ, ಪ್ರಧಾನ ಅರ್ಚಕರು ಜಡೆ ರಮೇಶರಾವ್ ತಿಳಿಸಿದ್ದಾರೆ.

## 25 ನೇ ವರ್ಷದ ಕಾರ್ಗಿಲ್ ವಿಜಯೋತ್ಸವ ಇಂದು ರಾಯಲ್ ಎನ್‌ಫೀಲ್ಡ್ ಬೈಕ್ ರ‍್ಯಾಲಿ

ದಾವಣಗೆರೆ, ಜು. 25- ನಗರದ ಪ್ರೇರಣಾ ಯುವ ಸಂಸ್ಥೆ ವತಿಯಿಂದ ನಾಳೆ ದಿನಾಂಕ 26 ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಿಂದ 25 ನೇ ವರ್ಷದ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ 'ರಾಯಲ್ ರ‍್ಯಾಲಿ ಫಾರ್ ರಾಯಲ್ ವಿಕ್ಟರಿ' ಎನ್ನುವ ರಾಯಲ್ ಎನ್‌ಫೀಲ್ಡ್ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಎಸ್.ಟಿ. ವೀರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹೈಸ್ಕೂಲ್ ಮೈದಾನದಿಂದ ಆರಂಭವಾಗಲಿರುವ ಬೈಕ್ ರ‍್ಯಾಲಿಯು ರಾಜಬೀದಿಗಳ ಮುಖಾಂತರ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿನ ಸೈನಿಕರ ಸ್ಮಾರಕ ಅಮರ್ ಜವಾನ್ ಉದ್ಯಾನವನದ ಬಳಿ ಮುಕ್ತಾಯವಾಗಲಿದೆ ಎಂದು ಅವರು ಮಾಹಿತಿ ನೀಡಿದರು.

ನಂತರ ಸಂಜೆ 5.30 ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ದೇವಸ್ಥಾನ ಸಮರ್ಥನಾ ಸೇವಾ ಸಮಿತಿ ಸಂಚಾಲಕ ಮುನಿಯಪ್ಪ ಪ್ರಮುಖ ಭಾಷಣಕಾರರಾಗಿ ಆಗಮಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಾ. ಜಿ.ಎಂ. ಗಂಗಾಧರಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ನೇತ್ರ ತಜ್ಞ ಡಾ. ಶಿವಕುಮಾರ್, ಮಾಜಿ ಯೋಧರ ಸಂಘದ ಅಧ್ಯಕ್ಷ ಸತ್ಯ ಪ್ರಕಾಶ್, ಮಂಜಾನಾಯ್ಕ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಹೇಶ್ ಶೆಟ್ಟಿ, ಸತ್ಯಪ್ರಕಾಶ್, ಅಶೋಕ್, ಗಣೇಶ್ ಕಿರಣ್ ಉಪಸ್ಥಿತರಿದ್ದರು.

## ನಿಟುವಳ್ಳಿಯಲ್ಲಿ ಇಂದು ಅಜ್ಜಿ ಹಬ್ಬ

ಆಷಾಢ ಮಾಸದ ಕಡೇ ಶುಕ್ರವಾರವಾದ ಇಂದು ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಟ್ರಸ್ಟ್ ಹಾಗೂ ಗ್ರಾಮದ ವತಿಯಿಂದ ಅಜ್ಜಿ ಹಬ್ಬವನ್ನು ಏರ್ಪಡಿಸಲಾಗಿದೆ. ಮನೆಯಲ್ಲಿ ಪೂಜೆ ಮಾಡಿದ (ಅಜ್ಜಿ, ಅಮ್ಮ) ಅಜ್ಜಿ ಕುಡಿಕೆಯನ್ನು ರಾತ್ರಿ 9 ರೊಳಗೆ ಕಳುಹಿಸಬೇಕೆಂದು ಟ್ರಸ್ಟಿನ ಅಧ್ಯಕ್ಷ ಹೆಚ್.ಬಿ.ಮಂಜುನಾಥ್ ಅವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಪಿಜಿಸಿಇಟಿ ಕಾರ್ಯಾಗಾರ

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಂಬಿಎ ವಿಭಾಗದಲ್ಲಿ ಪಿಜಿಸಿಇಟಿ ಉಚಿತ ಕಾರ್ಯಾಗಾರ ಇಂದು ಮತ್ತು ನಾಳೆ ನಡೆಯಲಿದೆ. ವಿವರಕ್ಕೆ 9739034751, 96638 68258 ಕ್ಕೆ ಸಂಪರ್ಕಿಸುವಂತೆ ಕಾಲೇಜಿನ ಪ್ರಾಚಾರ್ಯ ಡಾ. ಡಿ.ಬಿ. ಗಣೇಶ್ ತಿಳಿಸಿದ್ದಾರೆ.

## ರೈತರ ನಿರೀಕ್ಷೆ ಹುಸಿಗೊಳಿಸಿದ ಬಜೆಟ್ : ಬಲ್ಲೂರು ರವಿಕುಮಾರ್

ದಾವಣಗೆರೆ, ಜು. 25- ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಕೇಂದ್ರ ಬಜೆಟ್ ರೈತರ ನಿರೀಕ್ಷೆಗಳನ್ನು ಹುಸಿಗೊಳಿಸಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಟೀಕಿಸಿದ್ದಾರೆ.

2014 ಹಾಗೂ 2019 ರ ಚುನಾವಣೆಯಲ್ಲಿ ಸ್ವಾಮಿನಾಥನ್ ವರದಿ ಜಾರಿ ಮಾಡುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದರು. ನಂತರ ಬಂಡವಾಳ ಶಾಹಿ ಕಪಿಮುಷ್ಠಿಗೆ ಸಿಲುಕಿ, ವರದಿ ಜಾರಿ ಮಾಡಲಿಲ್ಲ ಎಂದು ಹೇಳಿದ್ದಾರೆ.

ಆಂಧ್ರ ಪ್ರದೇಶ ಮತ್ತು ಬಿಹಾರ ರಾಜ್ಯಗಳಿಗೆ ಕೇಂದ್ರ ಸರ್ಕಾರ ಮಣೆ ಹಾಕಿದ್ದು, ಪ್ರಧಾನಿ ನರೇಂದ್ರ ಮೋದಿಯರು ಶ್ರೀಮಂತರ ಪರ ಕೆಲಸ ಮಾಡುತ್ತಿದ್ದಾರೆ.

ಮುಂದೊಂದು ದಿನ ನೀವು ಸಹ ವಿರೋಧ ಪಕ್ಷದಲ್ಲಿ ಕೂರಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.


### ಪುರಸಭಾ ಕಾರ್ಯಾಲಯ ಹೊನ್ನಾಳಿ

ದಾವಣಗೆರೆ ಜಿಲ್ಲೆ, ಕರ್ನಾಟಕ ರಾಜ್ಯ, ಫೋ. : 08188 251021

ಹೊಪುಸ/ಪತ್ರಿಕೆ/ಸಿಆರ್/04/2024-25 ದಿನಾಂಕ : 25.07.2024

**ಜಾಹೀರಾತು ಪ್ರಕಟಣೆ**

ಈ ಮೂಲಕ ಹೊನ್ನಾಳಿ ಪುರಸಭೆ ವ್ಯಾಪ್ತಿಯ ಸಮಸ್ತ ಎಲ್ಲಾ ಆಸ್ತಿ ಮಾಲೀರುಗಳಿಗೆ ತಿಳಿಯಪಡಿಸುವುದೇನೆಂದರೆ, ನಿಮ್ಮ ಮಾಲೀಕತ್ವದಲ್ಲಿರುವ ಆಸ್ತಿಗಳ ಆಸ್ತಿ ತೆರಿಗೆ, ನೀರಿನ ತೆರಿಗೆ ಹಾಗೂ ಪುರಸಭೆ ಮಾಲೀಕತ್ವದಲ್ಲಿರುವ ಮಳಿಗೆ ಬಾಡಿಗೆ, ಉದ್ದಿಮೆದಾರರು ಟ್ರೇಡ್‌ಲೈಸೆನ್ಸ್ ಫೀ, ಜಾಹೀರಾತು ಶುಲ್ಕಗಳನ್ನು ನಿಗದಿತ ಅವಧಿಯೊಳಗಾಗಿ ಪಾವತಿಸಿ ಆ ದಂಡದಿಂದ ಮುಕ್ತ ಗೊಳ್ಳಲು ನಿರಂತರ ಮಳೆಯಾಗುತ್ತಿರುವುದರಿಂದ ಕಾಯಿಸಿ ಆರಿಸಿದ ನೀರನ್ನು ಕುಡಿಯಲು ಹಾಗೂ ಸಾಂಕ್ರಾಮಿಕ ರೋಗಗಳು ಹರಡದಂತೆ ನಿಮ್ಮ ಮನೆಗಳ ಸುತ್ತ-ಮುತ್ತ ಕಸ, ಮುಸುರೆಗಳನ್ನು ಹಾಕದಂತೆ ಕೋರುತ್ತಾ, ಪಟ್ಟಣದ ಅಭಿವೃದ್ಧಿಗೆ ಸಹಕರಿಸಲು ಹೊನ್ನಾಳಿ ಪುರಸಭೆಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಿ/- ಮುಖ್ಯಾಧಿಕಾರಿ
ಪುರಸಭೆ ಹೊನ್ನಾಳಿ.


## ಸ್ನೇಹದಿಂದ ಸಂಸ್ಥೆಯ ವಾರ್ಷಿಕೋತ್ಸವ



**ರಾಣೇಬೆನ್ನೂರು**

ರಾಣೇಬೆನ್ನೂರು, ಜು.25 - ಇಲ್ಲಿನ ಶ್ರೀರಾಮ ನಗರದ ಸ್ನೇಹದೀಪ ಅಂಧ ಅಂಗವಿಕಲರ ಸಂಸ್ಥೆಯಲ್ಲಿ ಶನಿವಾರ ಸಂಸ್ಥೆಯ 8ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವನ್ನು ಉಪಸಭಾಪತಿ ರುದ್ರಪ್ಪ ಲಮಾಣಿ ಉದ್ಘಾಟಿಸಿದರು. ಪ್ರಭಾಕರ ಮುದಗಲ್, ಸಂಜೀವ ಶಿರಹಟ್ಟಿ, ಸಂಸ್ಥೆಯ ಧರ್ಮದ ಕೆ.ಜಿ.ಮೋಹನ್, ಆರ್.ಆರ್.ಪಾಟೀಲ್, ವಸಂತ ಹುಲ್ಲತ್ತಿ, ಪರಮೇಶಪ್ಪ ಮುದಿಗೌಡರ್ ಮತ್ತು ಅಂಧ ವಿದ್ಯಾರ್ಥಿಗಳ ಪಾಲಕರು, ಸಂಸ್ಥೆಯ ಸಿಬ್ಬಂದಿ ಇದ್ದರು.

## ಮ್ಯಾಪ್ ವಲಯದಲ್ಲಿ ಹೆಚ್ಚಿದ ಸ್ಪರ್ಧೆ

ನವದೆಹಲಿ, ಜು. 25 - ದೇಶದ ಮ್ಯಾಪ್ ವಲಯದಲ್ಲಿ ಸ್ಪರ್ಧೆ ಹೆಚ್ಚಾಗಿದ್ದು, ಗೂಗಲ್ ಮ್ಯಾಪ್ಸ್ ಸೇವಾ ದರಗಳನ್ನು ಕಡಿತ ಮಾಡುವ ಜೊತೆಗೆ, ಹೊಸ ಅಂಶಗಳನ್ನು ಸೇರ್ಪಡೆ ಮಾಡಿಕೊಂಡಿದೆ.

ಇತ್ತೀಚೆಗಷ್ಟೇ ಗೂಗಲ್ ಮ್ಯಾಪ್ಸ್ ಜೊತೆ ಸ್ಪರ್ಧೆಗೆ ಓಲಾ ಮ್ಯಾಪ್ಸ್ ಸಜ್ಜಾಗಿತ್ತು. ಅದರ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ. ಆಗಸ್ಟ್ 1 ರಿಂದ ಜಾರಿಗೆ ಬರುವಂತೆ ಸೇವಾ ದರಗಳನ್ನು ಶೇಕಡಾ 70ರಷ್ಟು ಇಳಿಸುವುದಾಗಿ ಗೂಗಲ್ ಮ್ಯಾಪ್ಸ್ ಈ ಹಿಂದೆ ತಿಳಿಸಿತ್ತು.

ಭಾರತದ ಕಂಪನಿಗಳು ಗೂಗಲ್ ಮ್ಯಾಪ್ಸ್ ತೊರೆದು ತಮ್ಮ ಓಲಾ ಮ್ಯಾಪ್ಸ್ ಬಳಸಬೇಕು ಎಂದು ಓಲಾ ಸ್ಥಾಪಕ ಭವೀಶ್ ಅಗರ್ವಾಲ್ ಬಹಿರಂಗ ಕರೆ ನೀಡಿದರು. ಒಂದು ವರ್ಷದವರೆಗೆ ಓಲಾ ಮ್ಯಾಪ್ಸ್ ಉಚಿತವಾಗಿ ನೀಡುವುದಾಗಿಯೂ ಅವರು ಹೇಳಿದರು.

ಈಗ ಹೇಳಿಕೆಯೊಂದನ್ನು ನೀಡಿರುವ ಗೂಗಲ್ ಮ್ಯಾಪ್ಸ್, ಎಲೆಕ್ಟ್ರಾನಿಕ್ ವಾಹನಗಳ ಚಾರ್ಜಿಂಗ್ ತಾಣಗಳು, ಕಾರುಗಳಿಗೆ ಸುಗಮವಾಗಿ ಸಾಗುವ ಮಾರ್ಗಗಳು ಮತ್ತಿತರೆ ವಿವರಗಳನ್ನು ನೀಡುವುದಾಗಿ ತಿಳಿಸಿದೆ. ಓಲಾ ಮ್ಯಾಪ್ಸ್‌ಗೂ ತನ್ನ ನಿರ್ಧಾರಕ್ಕೂ ಸಂಬಂಧ ಇಲ್ಲ ಎಂದು ಗೂಗಲ್ ಸ್ಪಷ್ಟಪಡಿಸಿದೆ.

## ಮಲೇಬೆನ್ನೂರಿನಲ್ಲಿಂದು ವಿದ್ಯುತ್ ವ್ಯತ್ಯಯ

ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಶಾಖಾಧಿಕಾರಿ ಚೇತನ್ ತಿಳಿಸಿದ್ದಾರೆ.

## ಹಾವೇರಿ ಶರಣ ಕಮ್ಮಟದಲ್ಲಿ ಚಿತ್ರಕಿ ಗಾಯನ



ದಾವಣಗೆರೆ, ಜು. 24 - ಹಾವೇರಿಯ ಶಿವಬಸವ ಕಲ್ಯಾಣ ಮಂಟಪದಲ್ಲಿ ಈಚೆಗೆ ನಡೆದ 18ನೇ ಶರಣ ಕಮ್ಮಟದಲ್ಲಿ ಹಾಗೂ ಜಯದೇವಪುರದಲ್ಲಿ ನಡೆದ ಜಯವಿಭವ ಸ್ವಾಮಿಗಳ ಸಂಸ್ಮರಣೆ ಕಾರ್ಯಕ್ರಮದಲ್ಲಿ ಚಿತ್ರಿಕಿ ಶಿವಕುಮಾರ್ ಅವರು ಬಸವಣ್ಣನವರ ವಚನ ಹಾಗೂ ಪಂಚಾಕ್ಷರಿ ಗವಾಯಿಗಳವರ ವಚನ ಹಾಡಿದರು.







# ಮದರ್ ಥೆರೆಸಾ, ಡಾ. ಬಿ.ಸಿ. ರಾಯ್ ಸೇವಾ ಪ್ರಶಸ್ತಿ ಪ್ರದಾನ



ದಾವಣಗೆರೆ, ಜು. 25- ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ನಗರದ ಮಹಿಳೆಯರು ಮತ್ತು ಮಕ್ಕಳ ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿಗೆ ಈಚೆಗೆ ಮದರ್ ಥೆರೆಸಾ ಮತ್ತು ಡಾ. ಬಿ.ಸಿ. ರಾಯ್ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಎಸ್.ಪಿ. ಮಧು, ಪ್ರಸೂತಿ ತಜ್ಞೆ ಡಾ. ಎಸ್.ಜಿ. ಭಾರತಿ, ಅರಿವಳಿಕೆ ತಜ್ಞ ಡಾ. ಎಸ್.ಸಿ. ಬಸವರಾಜ, ಶುಶ್ರೂಷಾಧಿಕಾರಿ ಕೆ.ಹೆಚ್. ಸುಧಾ, ಸಹಾಯಕ ಆಡಳಿತಾಧಿಕಾರಿ ಟಿ.ಪಿ. ಹೇಮಣ್ಣ ಇವರು ಪ್ರಶಸ್ತಿ ಸ್ವೀಕರಿಸಿದರು.

ಟ್ರಸ್ಟ್ ಅಧ್ಯಕ್ಷ ಡಾ. ಹೆಚ್.ಎನ್. ಮಲ್ಲಿಕಾರ್ಜುನ್ ಮಾತನಾಡಿ, ಟ್ರಸ್ಟ್‌ನಿಂದ ಮಸಾಜದಲ್ಲಿ ಒಳ್ಳೆಯ ಕೆಲಸ ಮಡುವವರನ್ನು ಗುರುತಿಸಿ, ಕೃತಜ್ಞತೆ ಸಲ್ಲಿಸುವ ಕಾರ್ಯ ಸದಾ ನಡೆಯುತ್ತಲೇ ಬಂದಿದೆ. ಲಕ್ಷ್ಯಾ ಮಾತ್ರ ಆರೋಗ್ಯ ಕಾರ್ಯಕ್ರಮದಡಿ ಆಸ್ಪತ್ರೆಗೆ ರಾಷ್ಟ್ರೀಯ ಗುಣಮಟ್ಟದ ಪ್ರಮಾಣ ಪತ್ರ ಲಭಿಸಿರುವ ಪ್ರಯುಕ್ತ ಪ್ರಶಸ್ತಿ ನೀಡಲಾಗುತ್ತಿದೆ ಎಂದರು.

ಟ್ರಸ್ಟಿನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ಆಸ್ಪತ್ರೆಯ ಎಲ್ಲರೂ ಶ್ರಮ, ಶ್ರದ್ಧೆ, ಪ್ರಾಮಾಣಿಕತೆ, ಪ್ರೀತಿ, ವಿಶ್ವಾಸದಿಂದ ಕಾರ್ಯವೆಸಗಿದ್ದಕ್ಕಾಗಿ ಈ ಪ್ರಶಸ್ತಿಗೆ ಭಾಜನರಾಗಿದ್ದೀರಿ ಎಂದು ಹೇಳಿದರು.

ಹೆಚ್ಚಿನ ಸಾಧನೆಗೆ ಬುದ್ಧನ ಜೀವನಾನಂದದ ಸೂತ್ರಗಳಾದ ಉದಾರತೆ, ಉತ್ಸಾಹ ತುಂಬುವ ಪ್ರಯತ್ನ, ತಾಳ್ಮೆ, ತನ್ನ ಮತ್ತು ಇತರರ ಮೇಲಕ್ಕೆತ್ತುವ ವಿವೇಕ, ಪ್ರಜ್ಞಾಪೂರ್ವಕ ಎಚ್ಚರ, ನೈತಿಕ ಸ್ವಯಂ ಶಿಸ್ತು ಇವುಗಳ ಅಳವಡಿಕೆ ಬಹುಮುಖ್ಯ ಎಂದು ತಿಳಿಸಿದರು.

ವೈದ್ಯಕೀಯ ಅಧೀಕ್ಷಕ ಡಾ. ಎಸ್.ಪಿ. ಮಧು ಮಾತನಾಡಿ, ನಮ್ಮ ಆಸ್ಪತ್ರೆಗೆ ಲಭಿಸಿರುವ ಈ ಗೌರವಕ್ಕೆ ಪ್ರತಿಯೊಬ್ಬ ಸಿಬ್ಬಂದಿ ಕಾರಣ. ಅವರೆಲ್ಲರಿಗೂ ಈ ಗೌರವ ಸಲ್ಲಬೇಕು ಎಂದರು. ಕರುಣಾ ಟ್ರಸ್ಟಿನ ಸಿಬ್ಬಂದಿ ಹಾಗೂ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಸಿಬ್ಬಂದಿ ಭಾಗವಹಿಸಿದ್ದರು.

# ಬೆಂಗಳೂರು ವಿಕೋಪ ನಿರ್ವಹಣೆ, ಕರ್ನಾಟಕ ಅಗ್ನಿ ಶಾಮಕ ಯೋಜನೆಗಳಿಗೆ ಒಪ್ಪಿಗೆ

ನವದೆಹಲಿ, ಜು. 25 - ಬೆಂಗಳೂರು ಸೇರಿದಂತೆ ದೇಶದ ಹಲವು ನಗರಗಳ ವಿಕೋಪ ನಿರ್ವಹಣೆ ಯೋಜನೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಉನ್ನತ ಹಂತದ ಸಮಿತಿ ಒಪ್ಪಿಗೆ ನೀಡಿದೆ.

ಬೆಂಗಳೂರು, ಮುಂಬೈ, ಕೊಲ್ಕತಾ, ಹೈದರಾಬಾದ್, ಅಹಮದಾಬಾದ್ ಹಾಗೂ ಪುಣೆ ನಗರಗಳಿಗೆ ಸಂಬಂಧಿಸಿದ ಯೋಜನಗಳಿಗೆ ಒಪ್ಪಿಗೆ ನೀಡಲಾಗಿದೆ. ಈ ಯೋಜನೆಗಳ ಒಟ್ಟು ಮೊತ್ತ2,514.36 ಕೋಟಿ ರೂ. ಆಗಿದೆ.

ಕರ್ನಾಟಕ, ಅಸ್ಸಾಂ ಹಾಗೂ ತಮಿಳುನಾಡುಗಳ ಅಗ್ನಿಶಾಮಕ ಸೇವೆಗಳ ವಿಸ್ತರಣೆ ಮತ್ತು ಆಧುನೀಕರಣದ 810.64 ಕೊಟಿ ರೂಪಾಯಿಗಳ ಯೋಜನೆಗೂ ಒಪ್ಪಿಗೆ ನೀಡಲಾಗಿದೆ.

ಹಿಮಾಚಲ ಪ್ರದೇಶ, ಉತ್ತರಖಂಡ ಹಾಗೂ ಅರುಣಾಚಲ ಪ್ರದೇಶಗಳಲ್ಲಿ ಪ್ರವಾಹ ನಿರ್ಮೂಲನೆ ಕ್ರಮಗಳಿಗಾಗಿ 150 ಕೋಟಿ ರೂ. ಯೋಜನೆಗೂ ಒಪ್ಪಿಗೆ ನೀಡಲಾಗಿದೆ.

## ಖನಿಜ ತೆರಿಗೆ : ಮಿತಿ ಹೇರಲು ಸಂಸತ್ತಿಗೆ ಅಧಿಕಾರ

ನವದೆಹಲಿ, ಜು. 25 - ಖನಿಜಗಳ ಮೇಲೆ ತೆರಿಗೆ ಹೇರಲು ರಾಜ್ಯಗಳಿಗೆ ಅಧಿಕಾರ ಇದೆ. ಆದರೂ, ದೇಶಕ್ಕೆ ಸಮರ್ಪಕ ಖನಿಜ ಪೂರೈಕೆ ಮಾಡುವ ಸಲುವಾಗಿ ರಾಜ್ಯಗಳ ಅಧಿಕಾರದ ಮೇಲೆ ಮಿತಿ ಹೇರಬಹುದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ತಿಳಿಸಲಾಗಿದೆ.

ಖನಿಜಗಳ ಮೇಲೆ ತೆರಿಗೆ ಹೇರುವ ಹಕ್ಕು ರಾಜ್ಯಗಳಿಗೆ ಇದೆ. ಆದರೆ ಖನಿಜ ಅಭಿವೃದ್ಧಿಗಾಗಿ ಸಂಸತ್ತು ಮಿತಿ ಹೇರಬಹುದು ಎಂದು ತೀರ್ಪಿನಲ್ಲಿ ಹೇಳಲಾಗಿದೆ.


ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ www.hindusmatrimony.com
SGM Tours ಎಸ್‌ಜಿಎಂ ಟೂರ್ಸ್
ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಬೆಂಗಳೂರು.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
ಚಾರ್‌ಧಾಮ್ ವಿಶೇಷ ಯಾತ್ರೆ SEPT OCT
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ*)
ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
ದೋಧಾಮ್ ವಿಶೇಷ ಯಾತ್ರೆ
ಸಂದರ್ಶಿಸುವ ಸ್ಥಳಗಳು : ಕೇದಾರ್‌ನಾಥ್, ಬದರಿನಾಥ್ OCT
ವೈಷ್ಣೋದೇವಿ, ಕುಲುಮನಾಲಿ, ಆಗ್ರಾ, ಮಥುರಾ ಪ್ರವಾಸ
ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್, ವಾಘಾ ಬಾರ್ಡರ್, ದೆಹಲಿ, ಆಗ್ರಾ, ಕುರುಕ್ಷೇತ್ರ
NOV ಕಾಶಿ ಯಾತ್ರೆ
ಕಾಶಿ, ಅಯೋಧ್ಯ, ಗಯಾ, ಬುದ್ದಗಯಾ, ಪ್ರಯಾಗ್‌ರಾಜ್,
DEC ರಾಮೇಶ್ವರಂ ಯಾತ್ರೆ
ಮಧುರೈ, ಕನ್ಯಾಕುಮಾರಿ, ಅನಂತಪದ್ಮನಾಭ, ರಾಮೇಶ್ವರಂ, ಶ್ರೀರಂಗಂ ಇತ್ಯಾದಿ
ಸಂಚಾಲಕರು : ವೇ|| ಲೋಕೇಶಯ್ಯ ಎಂ.
78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ


# ವಾಲ್ಮೀಕಿ ನಿಗಮ ಹಗರಣದ ತನಿಖಾ ವ್ಯಾಪ್ತಿ ಹೆಚ್ಚಳ ಇನ್ನಷ್ಟು ಜನರ ವಿಚಾರಣೆ, ಆಯೋಗಕ್ಕೆ ವರದಿ

ಬೆಂಗಳೂರು, ಜು. 25 - ವಾಲ್ಮೀಕಿ ನಿಗಮ ಹಗರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ, ತನ್ನ ತನಿಖಾ ವ್ಯಾಪ್ತಿ ಹೆಚ್ಚಿಸಿದೆ. ಅಕ್ರಮದಲ್ಲಿ ಭಾಗಿಯಾದ ಇನ್ನಷ್ಟು ಸರ್ಕಾರಿ ಹಾಗೂ ಖಾಸಗಿ ವ್ಯಕ್ತಿಗಳ ವಿಚಾರಣೆ ನಡೆಸಲು ಮುಂದಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಚುನಾವಣೆ ವೇಳೆ ನಡೆದ ಅಕ್ರಮಗಳ ಕುರಿತ ಮಾಹಿತಿಯನ್ನು ಚುನಾವಣಾ ಆಯೋಗಕ್ಕೂ ಸಹ ಸಲ್ಲಿಸಲಾಗುವುದು. ಲೋಕಸಭಾ ಚುನಾವಣೆಯ ವೇಳೆ ನಿಗಮದ ಹಗರಣದಿಂದ ಪಡೆಯಲಾದ ಹಣವನ್ನು ಮದ್ಯ ಖರೀದಿಗೆ ಬಳಸಲಾಗಿತ್ತು ಎಂದು ಆರೋಪಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ನಿರ್ದೇಶಕ ಕಲ್ಲೇಶ್ ಹೊಂದಿರುವ ಪಾತ್ರದ ಬಗ್ಗೆ ಇನ್ನಷ್ಟು ತನಿಖೆ ನಡೆಸಲಾಗುತ್ತಿದೆ. ಇಲಾಖೆಯಲ್ಲಿ ನಡೆದ ಭ್ರಷ್ಟಾಚಾರದ ಆರೋಪದ ಮೇಲೆ ಇತ್ತೀಚೆಗೆ ಕಲ್ಲೇಶ್ ಅಮಾನತ್ತುಗೊಳಿಸಲಾಗಿತ್ತು. ಈ ವಿವರ ಪಡೆದ ನಂತರ ಜಾರಿ ನಿರ್ದೇಶನಾಲಯ ಮತ್ತಷ್ಟು ತನಿಖೆಗೆ ಮುಂದಾಗಿದೆ. ಜಾರಿ ನಿರ್ದೇಶನಾಲಯದ ಅಧಿಕಾರಿಗಳಾದ ಮನೋಜ್ ಮಿತ್ತಲ್ ಹಾಗೂ ಮುರಳಿ ಕಣ್ಣನ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಆರೋಪ ಹೊರಿಸಲು ನನ್ನ ಮೇಲೆ ಒತ್ತಡ ಹೇರಿದ್ದರು ಕಲ್ಲೇಶ್ ಪೊಲೀಸರಲ್ಲಿ ದೂರು ನೀಡಿದ್ದರು.

ಬೆಂಗಳೂರು ಪೊಲೀಸರು ಈ ಬಗ್ಗೆ ಎಫ್.ಐ.ಆರ್. ದಾಖಲಿಸಿದ್ದರು. ಆದರೆ ಕರ್ನಾಟಕ ಹೈಕೋರ್ಟ್ ಎಫ್.ಐ.ಆರ್.ಗೆ ತಡೆಯಾಜ್ಞೆ ನೀಡಿದೆ.

ವಾಲ್ಮೀಕಿ ಹಗರಣದಲ್ಲಿ ಕಲ್ಲೇಶ್ ಪ್ರಮುಖ ಕೊಂಡಿ. ಪ್ರಕರಣದಲ್ಲಿ ಆತನ ವಿರುದ್ಧ ಗಟ್ಟಿ ಸಾಕ್ಷಿಗಳು ಕಂಡುಬಂದಿವೆ ಎಂದು ಜಾರಿ ನಿರ್ದೇಶನಾಲಯದ ಮೂಲಗಳು ತಿಳಿಸಿವೆ.

ಈ ಹಗರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಹಾಗೂ ಖಾಸಗಿ ವ್ಯಕ್ತಿಗಳ ವಿಚಾರಣೆ ನಡೆಸಿದಾಗ ಹೆಚ್ಚಿನ ವಿವರಗಳು ದೊರೆತಿವೆ. ಪ್ರಕರಣದ ವಿಚಾರಣೆಗಾಗಿ ಮತ್ತಷ್ಟು ಜನರಿಗೆ ಸಮನ್ಸ್ ಕಳುಹಿಸಲಾಗುವುದು ಎಂದು ಮೂಲಗಳು ಹೇಳಿವೆ.

# ಇಂದಿನಿಂದಲೇ ಭದ್ರಾ ನೀರು ಹರಿಸಲು ಧನಂಜಯ ಆಗ್ರಹ



ದಾವಣಗೆರೆ, ಜು. 25- ಆಗಸ್ಟ್ 5 ಅಥವಾ 6 ರಂದು ಭದ್ರಾ ನೀರಾವರಿ ಸಲಹಾ ಸಮಿತಿ (ಐಸಿಸಿ) ಸಭೆ ಕರೆದು, ತದನಂತರ ನಾಲೆಗೆ ನೀರು ಹರಿಸಲು ತೀರ್ಮಾನಿಸಬೇಕು ಎಂದು ನಿನ್ನೆ ನಡೆದ ಕರ್ನಾಟಕ ನೀರಾವರಿ ನಿಗಮದ ಸಭೆಯಲ್ಲಿ ಭದ್ರಾ ಅಚ್ಚುಕಟ್ಟು ಪ್ರದೇಶದ ಶಾಸಕರು ಸಚಿವರು ಚರ್ಚಿಸಿರುವುದು ದುರ್ದೈವ ಸಂಗತಿಯಾಗಿದೆ ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ ರೈತ ಮುಖಂಡ ಧನಂಜಯ್ ಕಡ್ಲೇಬಾಳು ಖಂಡಿಸಿದ್ದಾರೆ.

ದಾವಣಗೆರೆ ಜಿಲ್ಲೆಯ ಜೀವನಾಡಿ ಭದ್ರಾ ಡ್ಯಾಂ ನೀರಿನ ಮಟ್ಟ ದಿನೇ ದಿನೇ ಹೆಚ್ಚಾಗುತ್ತಿದೆ. ನೀರಿನ ಮಟ್ಟ ಇಂದು ಬೆಳಿಗ್ಗೆ 6 ಗಂಟೆಗೆ 171 ಅಡಿ 6 ಇಂಚು ಇದ್ದು, 26044 ಕ್ಯೂಸೆಕ್ ಒಳಹರಿವು ಇದೆ. ಇಂದು ಒಳಹರಿವು, 17383 ಕ್ಯೂಸೆಕ್ ಇದ್ದದ್ದು ಇಂದು ಏರಿಕೆಯಾಗಿದೆ. ಡ್ಯಾಂ ತುಂಬುವುದು ಗ್ಯಾರಂಟಿಯಾಗಿದೆ. ರೈತರಲ್ಲಿ ಸಂತಸ ಮನೆ ಮಾಡಿದೆ. ಮೊನ್ನೆ ನಡೆದ ರೈತರ ಸಭೆಯಲ್ಲಿ ಜಿಲ್ಲಾಧಿಕಾರಿಯವರು ಇನ್ನೊಂದೆರಡು ದಿನಗಳಲ್ಲಿ ನಾಲೆಗೆ ನೀರು ಹರಿಸಲಾಗುವುದು ಎಂದು ಹೇಳಿದ್ದರು. ಅದರಂತೆ ಇಂದಿನಿಂದ ನೀರು ಹರಿಸಿದ್ರೆ, ಕಳೆದ ಹಂಗಾಮಿನಲ್ಲಿ ಬೀಕರ ಬಿಸಿಲಿನ ತಾಪಮಾನದಿಂದ ಒಣಗಿರುವ ಕೆರೆ ಕಟ್ಟೆಗಳನ್ನು ತುಂಬಿಸಿಕೊಳ್ಳಬಹುದು ಮತ್ತು ರೈತರು ಭತ್ತ ಬೀಜ ಚೆಲ್ಲಲು ಅನುಕೂಲವಾಗುತ್ತದೆ.

ಸಾಮಾನ್ಯವಾಗಿ ಡ್ಯಾಂ ನೀರಿನ ಮಟ್ಟ 186 ಅಡಿ ಪೂರ್ಣ ತುಂಬಲು ಬಿಡುವುದಿಲ್ಲ. ಮುಂಜಾಗ್ರತೆ ಕ್ರಮವಾಗಿ ನೀರಿನ ಮಟ್ಟ 182-183 ಅಡಿ ತಲುಪಿದ ತಕ್ಷಣ ಹೊಳೆಗೆ ಹರಿಸಲಾಗುತ್ತದೆ. ಇದರಿಂದ ನೀರು ವ್ಯರ್ಥವಾಗಿ ಹರಿದು ಹೋಗುತ್ತದೆ. ಆದ್ದರಿಂದ ಇಂದು ರಾತ್ರಿಯಿಂದ ನಾಲೆಗೆ ನೀರು ಹರಿಸಬೇಕು ಎಂದು ಧನಂಜಯ್ ಅವರು ಆಗ್ರಹಿಸಿದ್ದಾರೆ.

## ಕರಾಟೆಯಲ್ಲಿ ಸಾದತ್‌ಗೆ ಬಂಗಾರ



ದಾವಣಗೆರೆ, ಜು.25- ನಗರದಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಮುಕ್ತ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಇಲ್ಲಿನ ಚಾಣಕ್ಯ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿ.ಯು.ಸಿ. ವಿದ್ಯಾರ್ಥಿ ಸಾದತ್ ಮಹಮ್ಮದ್ ಅವರು ಕಾಟಾ ಮತ್ತು ಕುಮುಟೆ ಈ ಎರಡು ವಿಭಾಗದಲ್ಲಿ ಭಾಗವಹಿಸಿ ಬಂಗಾರದ ಪದಕ ಕೊರಳಿಗೇರಿಸಿಕೊಂಡಿದ್ದಾರೆ.


## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ವಿದ್ಯಾನಗರ ಕೊನೆ ಬಸ್ ನಿಲ್ದಾಣದಿಂದ ಹೆದ್ದಾರಿ ಸೇವಾ ರಸ್ತೆವರೆಗೆ, ವಾಣಿ ರೈಸ್ ಮಿಲ್ ಹಿಂಭಾಗ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಶಿವಕುಮಾರ ಸ್ವಾಮಿ ಬಡಾವಣೆ, 1 ಮತ್ತು 2ನೇ ಹಂತ, ಹದಡಿ ರಸ್ತೆ, ಸರ್ಕಾರಿ ಐಟಿಐ ಕಾಲೇಜು, ಸೆಂಟ್‌ಜಾನ್ ಸ್ಕೂಲ್, 60 ಅಡಿ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.



॥ ಶ್ರೀ ಗಣೇಶಾಯ ನಮಃ ॥
ದೈವಜ್ಞ ಸಮಾಜ ಸಂಘ (ರಿ.)
ರೇಣುಕಾ ಬಡಾವಣೆ, ಪಿ.ಬಿ. ರಸ್ತೆ, ದಾವಣಗೆರೆ.
62ನೇ ವಾರ್ಷಿಕ ಮಹಾಸಭೆ
ಸನ್ಮಾನ್ಯ ದೈವಜ್ಞ ಸಮಾಜ ಸಂಘದ ಸದಸ್ಯರುಗಳೇ,
2023-2024ನೇ ಸಾಲಿನ 62ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 10-08-2024ರ ಶನಿವಾರ ಸಂಜೆ 4.00 ಗಂಟೆಗೆ ದಾವಣಗೆರೆ ವಿನೋಬ ನಗರ, 1ನೇ ಮುಖ್ಯರಸ್ತೆಯಲ್ಲಿರುವ ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಪ್ರಶಾಂತ ವಿ. ವೆರ್ಣೇಕರ್ (ಹೆಗಡೆ) ಇವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ. ತಾವೆಲ್ಲರೂ ಸರಿಯಾದ ಸಮಯಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.
ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಪದಾಧಿಕಾರಿಗಳು


**ಭದ್ರಾ ಜಲಾಶಯ**



ನೀರಿನ ಮಟ್ಟ : 171 ಅಡಿ 6 ಇಂಚು
ಒಳ ಹರಿವು : 26044 ಕ್ಯೂಸೆಕ್ಸ್
ಹೊರ ಹರಿವು : 200 ಕ್ಯೂಸೆಕ್ಸ್
ಕಳೆದ ವರ್ಷ : 152 ಅಡಿ 9 ಇಂಚು

## ಜಿಲ್ಲೆಯಲ್ಲಿ ವಾಡಿಕೆಗಿಂತ 41 ಮಿ.ಮೀ. ಹೆಚ್ಚು ಮಳೆ

ದಾವಣಗೆರೆ,ಜು. 25- ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಪೂರ್ವ ಮುಂಗಾರು ಹಾಗೂ ಮುಂಗಾರಿನಲ್ಲಿ ವಾಡಿಕೆಗಿಂತ 41 ಮಿ.ಮೀ ಹೆಚ್ಚು ಮಳೆಯಾಗಿದೆ.

2024ರ ಜನವರಿಯಿಂದ ಜುಲೈ 23 ರ ವರೆಗಿನ 263 ಮಿ.ಮೀ ವಾಡಿಕೆಗೆ 371 ಮಿ.ಮೀ ಸರಾಸರಿ ಮಳೆಯಾಗಿದೆ. ತಾಲ್ಲೂಕುವಾರು ವಿವರದನ್ವಯ ಚನ್ನಗಿರಿ 352.8 ಮಿ.ಮೀ ವಾಡಿಕೆಗೆ 405.3, ದಾವಣಗೆರೆ 235.8 ಮಿ.ಮೀ ವಾಡಿಕೆಯಲ್ಲಿ 340.9, ಹರಿಹರ 255.1 ಮಿ.ಮೀ ವಾಡಿಕೆಗೆ 358.3, ಹೊನ್ನಾಳಿ 269.5 ವಾಡಿಕೆಗೆ 423.1, ಜಗಳೂರು 205 ಮಿ.ಮೀ ವಾಡಿಕೆಗೆ 279.2, ನ್ಯಾಮತಿ 374.6 ಮಿ.ಮೀ ವಾಡಿಕೆ ಮಳೆಗೆ 530 ಮಿ.ಮೀ ವಾಸ್ತವಿಕ ಮಳೆಯಾಗಿದೆ.

ಜೂನ್ ತಿಂಗಳಲ್ಲಿ ಜಿಲ್ಲೆಯಲ್ಲಿ 79 ಮಿ.ಮೀ ವಾಡಿಕೆಗೆ 76 ಮಿ.ಮೀ ಮಳೆಯಾಗಿದೆ. ಜುಲೈ ತಿಂಗಳಲ್ಲಿ 23 ರವರೆಗೆ 79 ಮಿ.ಮೀ ವಾಡಿಕೆಗೆ 150 ಮಿ.ಮೀ ಸರಾಸರಿ ಮಳೆಯಾಗಿದೆ ಹವಾಮಾನ ಇಲಾಖೆ ತಿಳಿಸಿದೆ.

## ಭಗತ್ ಸಿಂಗ್ ನಗರದಲ್ಲಿ ವ್ಯಕ್ತಿಯ ಸುಲಿಗೆ, ಕೊಲೆಗೆ ಯತ್ನ

ದಾವಣಗೆರೆ, ಜು. 25 - ಭಗತ್ ಸಿಂಗ್ ನಗರದ ಅಂಜುಮನ್ ಶಾಲೆ ಬಳಿ ಬುಧವಾರ ರಾತ್ರಿ 11.15ರ ವೇಳೆ ವ್ಯಕ್ತಿಯೊಬ್ಬರ ಸುಲಿಗೆ ನಡೆದಿದ್ದು, ತಲೆ ಮೇಲೆ ಕಲ್ಲು ಹಾಕಿ ಕೊಲೆಗೂ ಯತ್ನಿಸಲಾಗಿದೆ. ಈ ಕುರಿತು ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತರಳಬಾಳು ಬಡಾವಣೆ ನಿವಾಸಿ ಹೋಟೆಲ್ ವ್ಯಾಪಾರಿ ಎಂ.ಡಿ. ಶಿವಕುಮಾರ್ (52) ಸ್ನೇಹಿತನ ಮನೆಯಲ್ಲಿ ಊಟ ಮುಗಿಸಿಕೊಂಡು ಭಗತ್ ಸಿಂಗ್ ನಗರದ ಅಂಜುಮನ್ ಶಾಲೆ ಹತ್ತಿರ ಹೋಗುತ್ತಿರುವಗ ಮೂರು ಜನ ಹುಡುಗರ ಪೈಕಿ ಓರ್ವ ಏಕಾ ಏಕಿ ಮುಖಕ್ಕೆ ಗುದ್ದಿದ್ದು, ಮೂಗಿನಿಂದ ರಕ್ತ ಸುರಿಯಲಾರಂಭಿಸಿದೆ. ಆಗ ಶಿವಕುಮಾರ್ ಅವರ ಕೊರಳಿಗೆ ಕೈ ಹಾಕಿ ಬಂಗಾರದ ಸರ ಕಿತ್ತುಕೊಳ್ಳಲು ಓರ್ವ ಯತ್ನಿಸಿದ್ದಾನೆ. ತಪ್ಪಿಸಿಕೊಳ್ಳಲು ಯತ್ನಿಸಿದಾಗ ಇಬ್ಬರು ಹುಡುಗರು ಅಲ್ಲಿಯೇ ಬಿದ್ದಿದ್ದ ದೊಡ್ಡ ಕಲ್ಲು ಎತ್ತಿಕೊಂಡು ತನ್ನ ಮೇಲೆ ಹಾಕಿ ಕೊಲೆ ಮಾಡಲು ಯತ್ನಿಸಿದ್ದಾರೆ. ಅಷ್ಟರಲ್ಲಿ ಓರ್ವ ಕೊರಳಲ್ಲಿದ್ದ ಬಂಗಾರದ ಸರ ಕಿತ್ತುಕೊಂಡಿದ್ದಾನೆ. ಬಂಗಾರದ ಸರ 1.65 ಲಕ್ಷ ರೂ. ಮೌಲ್ಯದ್ದಾಗಿದೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಲಾಗಿದೆ.

ನಿನ್ನೆಯಷ್ಟೇ ಭಗತ್ ಸಿಂಗ್ ನಗರದಲ್ಲಿ ಪೊಲೀಸ್ ಕ್ವಾರ್ಟ್ರಸ್ ಹಿಂಭಾಗವೇ ಮನೆಯೊಂದರಲ್ಲಿ ಕಳ್ಳತನವಾದ ಪ್ರಕರಣ ವರದಿಯಾ ಗಿತ್ತು. ಇದೀಗ ರಾತ್ರಿ 11.15ರ ವೇಳೆಯೇ ಕೆಟಿಜೆ ನಗರ ಠಾಣಾ ವ್ಯಾಪ್ತಿಯಲ್ಲಿ ಸುಲಿಗೆ ಪ್ರಕರಣ ನಡೆದಿರುವುದು ಜನರಲ್ಲಿ ಆತಂಕ ಹೆಚ್ಚಿಸಿದೆ.









KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas